ಮುಂಬಯಿ ಕಾಯಿದೆ ಕೌನ್ಸಿಲಿನ ಡೆಪ್ಯುಟಿ ಪ್ರೆಸಿಡೆಂಟರಾದ ರಾವಬಹಾದ್ದೂರ ಎಸ್. ಟಿ. ಕಂಬಳಿ, ಎಮ್. ಎಲ್. ಸಿ.

ಇವರು, ಬೆಂಗಳೂರಲ್ಲಿ ನಡೆದ ಅಖಿಲಭಾರತ ಹತ್ತನೆಯ ವೀರಶೈವ ಮಹಾಸಭೆಯಲ್ಲಿ

ಅಧ್ಯಕ್ಷಸ್ಥಾನದಿಂದ ಮಾಡಿದ ಭಾಷಣವು.

ಸ್ವಾಗತ ಸಂಘದ ಸನ್ಮಾನ್ಯ ಅಧ್ಯಕ್ಷರಾದ ಮಿ. ಕೆ. ಪಿ. ಪುಟ್ಟಣ್ಣ ಶೆಟ್ಟರವರೇ! ಪ್ರತಿನಿಧಿಗಳೇ! ಪ್ರಿಯಬಂಧು ಭಗಿನಿಯರೇ! ತಾವೆಲ್ಲರೂ ನನ್ನನ್ನು ಈ ಮಹಾಸಭೆಯ ಅಧ್ಯಕ್ಷಸ್ಥಾನಕ್ಕೆ ನಿಯೋಜಿಸಿರುವದು, ನನ್ನ ಮೇಲೆ ಮಹದುಪಕಾರವಾಗಿದೆ. ಈ ಮರ್ಯಾದೆಯ ಸ್ಥಳಕ್ಕೆ ನನ್ನನ್ನೇ ಈ ಸಾರೆ ಯಾಕೆ ನಿಯಮಿಸಿಕೊಂಡಿರೆಂಬದು, ನಾನು ವಿಚಾರ ಮಾಡತಕ್ಕ ವಿಷಯವಲ್ಲ. ಸುಸಂಗತವಾದ ಹಾಗು ಪ್ರಜಾಜನರ ಹಿತೈಕ ಬುದ್ಧಿಯುಳ್ಳ ಮೈಸೂರು ಸಂಸ್ಥಾನಕ್ಕೆ ಅಂಕಿತರಾಗಿ, ಸಂಸ್ಥಾನದ ಆಡಳಿತದಲ್ಲಿ ಅಪರಿಮಿತ ಶ್ರಮವನ್ನು ವಹಿಸಿದವರಾಗಿ, ಸಕಲ ಪ್ರಜಾಜನರ ಸಮೃದ್ಧಿಯನ್ನೇ ಧ್ಯೇಯವಾಗಿ ಇಟ್ಟುಕೊಂಡು, ಸತ್ಕಾರ್ಯನಿರತರಾಗಿದ್ದ ತಮ್ಮಂಥ ಮಹನೀಯರು, ನನ್ನನ್ನೇ ಈ ಮಹಾಸಭೆಯ ಅಧ್ಯಕ್ಷಸ್ಥಾನಕ್ಕೆ ನೇಮಿಸಿಕೊಂಡು, ಮುಂದಿನ ಕಾರ್ಯ ಭಾಗವನ್ನು ನನ್ನ ಅಧಿಷ್ಠಾನದಲ್ಲಿಯೇ ಜರಗಿಸಬೇಕೆಂದು ನಿಶ್ಚಯಿಸಿದ್ದು, ನಾನು ಬಹಳೇ ಆದರದಿಂದ ಮನ್ನಿಸುತ್ತೇನೆ. ನಾನು ನಿಮ್ಮ ನಿಯೋಜನೆಯನ್ನು ಆದರಪೂರ್ವಕವಾಗಿ ಸ್ವೀಕಾರ ಮಾಡಿದ್ದು, ನನ್ನ ಆತ್ಮೀಯ ಜವಾಬದಾರಿಕೆಗಳನ್ನು ಅನುಲಕ್ಷಿಸದೆ, ಕೇವಲ ಕರ್ತವ್ಯ ಪರಾಯಣನಾಗಿ ಮಾಡಿರುವೆನೆಂದು ನಾನು ಬೇರೆ ಹೇಳಬೇಕಿಲ್ಲ. ನಮ್ಮ ಸಮಾಜದಲ್ಲಿ ಈ ಮಹಾಸಭೆಯ ಅಧ್ಯಕ್ಷಸ್ಥಾನಕ್ಕೆ ನನಗಿಂತಲೂ ಹೆಚ್ಚಿನ ಯೋಗ್ಯತೆಯುಳ್ಳವರು ಇರುವರೆಂದು ನನ್ನ ಮನವರಿಕೆಯಿದೆ. ಆದರೂ, ತಮ್ಮೆಲ್ಲರ ದಯಾನುಗ್ರಹದಿಂದ, ಗುರುಹಿರಿಯರ

ಶ್ರದ್ಧಾ ಪ್ರಭಾವದಿಂದ ಈ ಮಹತ್ಕಾರ್ಯಭಾರವನ್ನು ಹೊತ್ತುಕೊಂಡು ನೆರವೇರಿಸ ತಕ್ಕ ಸತ್ತ್ವಪುಷ್ಟ ಶಕ್ತಿಯನ್ನು ಕರುಣಾಘನನಾದ ಪರಮೇಶ್ವರನು ಮೂರ್ತಿಮಂತರಾಗಿ ನನ್ನಲ್ಲಿ ನೆಲೆಗೊಂಡು ತನ್ನ ಅಘಟಿತಘಟನಾಶಕ್ತಿಯನ್ನು ನನ್ನಲ್ಲಿ ಪ್ರೇರೇಪಿಸಿ ಸ್ವೀಕೃತ ಕಾರ್ಯವನ್ನು ಪಾರುಗಾಣಿಸಲು ನನಗೆ ಮತಿಕೊಡುವನೆಂದು ನಾನು ನಂಬುತ್ತೇನೆ.

ಮಹಾಸಭೆಯ ಅವಶ್ಯಕತೆ.

ವೀರಶೈವ ಸಮಾಜದ ಇತಿಹಾಸದಲ್ಲಿ ಈ ಮಹಾಸಭೆಯ ಅಧಿವೇಶನಗಳು ಮಹತ್ವವಾದ ಸಂಗತಿಗಳಾಗಿರುತ್ತವೆ. ನಮ್ಮ ಸಮಾಜದೊಳಗಿನ ಹಿಂದುಸ್ಥಾನದ ಎಲ್ಲ ಭಾಗಗಳಲ್ಲಿಯ ಮುಂದಾಳುಗಳು, ಸಮಾಜದ ಹಿತಾಸಕ್ತರಾದವರು, ಒಂದು ಯೋಗ್ಯವಾದ ಸ್ಥಳದಲ್ಲಿ ಕೂಡಿ, ಸಮಾಜಕ್ಕೆ ಸಂಬಂಧವಾದ ಅನೇಕ ವಿಷಯಗಳನ್ನು ಚರ್ಚಿಸಿ, ಸಮಾಜದ ಕುಂದು ಕೊರತೆಗಳನ್ನು ಹೋಗಲಾಡಿಸುವ ಉಪಾಯಗಳನ್ನು ಶೋಧಿಸಲಿಕ್ಕೂ, ಸಮಾಜದ ಏಳಿಗೆಯ ಕಾರಣಗಳನ್ನು ಹುಡುಕುವದಕ್ಕೂ, ಯಾವಾಗಲೂ ಎಲ್ಲ ವಿಷಯಗಳಲ್ಲಿಯೂ ಸಮಾಜವನ್ನು ಜಾಗ್ರತಾವಸ್ಥೆಯಲ್ಲಿಡುವ ಬಗೆಗಳನ್ನು ಸೂಚಿಸಲಿಕ್ಕೂ, ಸಮಾಜದ ಐಹಿಕ ಮತ್ತು ಪಾರತ್ರಿಕ ಉನ್ನತಿಯ ಸಾಧನೋಪಾಯಗಳನ್ನು ರೂಢಿಯಲ್ಲಿ ತರಲಿಕ್ಕೂ, ಸಮಾಜದ ವ್ಯಕ್ತಿಗಳಲ್ಲೆಲ್ಲ ಪ್ರೇಮಭಾವವನ್ನೂ, ಬಂಧುತ್ವವನ್ನೂ ಹುಟ್ಟಿಸಲಿಕ್ಕೂ, ಬೆಳೆಸಲಿಕ್ಕೂ, ಸಾಧ್ಯವಾದ ಮಾರ್ಗಗಳನ್ನು ತೋರಿಸಲಿಕ್ಕೂ, ಇತ್ಯಾದಿ ಸಂಗತಿಗಳಿಗೆ ಈ ಮಹಾಸಭೆಯ ಅಧಿವೇಶನಗಳು ಅವಶ್ಯಕವಾಗಿರುತ್ತವೆಂಬುದು ಸ್ಪಷ್ಟವಾಗಿ ಎಲ್ಲರಿಗೂ ತೋರುವ ಸಂಗತಿಯಾಗಿರುತ್ತದೆ. ಹೀಗಿದ್ದು, ಕಳೆದ ಏಳು ವರ್ಷಗಳಲ್ಲಿ ಈ ಸಭೆಯ ಅಧಿವೇಶನವು ಆಗದೆ ಇದ್ದದ್ದು, ವಿಷಾದಕರ ಸಂಗತಿಯಾಗಿದ್ದರೂ, ಈ ವರ್ಷ ಸಮಾಜ ಸೇವೈಕ ದೃಷ್ಟಿಯುಳ್ಳವರಾದ ಬೆಂಗಳೂರು ಪಟ್ಟಣದ ವೀರಶೈವ ಸದ್ಗೃಹಸ್ಥರು, ಒಳ್ಳೇ ಸ್ಫೂರ್ತಿಯಿಂದ ಸ್ವಾರ್ಥತ್ಯಾಗ ಮಾಡಿ, ಈ ಸಭೆಯನ್ನು ಕೂಡಿಸಿದ್ದಕ್ಕಾಗಿ ನಮ್ಮ ವೀರಶೈವ ಸಮಾಜವೆಲ್ಲವೂ ಅವರಿಗೆ ಋಣಿಯಾಗಿರುತ್ತದೆ. ಇವರ ಉದಾಹರಣೆಯು ನಮ್ಮ ಸಮಾಜದವರೆಲ್ಲರಿಗೆ ಶಿರಸಾ ಅನುಕರಣೀಯವಾಗಿರುತ್ತದೆಂದು ಹೇಳಲಿಕ್ಕೆ ನನಗೆ ಬಹಳೇ ಆನಂದವಾಗುತ್ತದೆ.

ಸುವಿಚಾರ ಪ್ರಗತಿಯು ಶ್ರೇಷ್ಠತೆಯು ಅಗತ್ಯವು.

ಜಗತ್ತಿನಲ್ಲಿ ಯಾವುದೊಂದು ಸಮಾಜದ ಉತ್ಕರ್ಷ, ವ್ಯಕ್ತಿಗಳ ಕೃತಿಗಳ ಮೇಲೆ ಪೂರ್ಣ ಅವಲಂಬಿಸಿದೆ, ವಿಚಾರ ಸಂಸ್ಕೃತಿಯ ಮೇಲೆಯೇ ಪೂರ್ಣವಾಗಿ ಅವಲಂಬಿಸಿರುತ್ತದೆ. ವ್ಯಕ್ತಿಗಳ ಕೃತಿಯಿಂದ ಕೆಲಮಟ್ಟಿಗೆ ಸಮಾಜಹಿತವಾಗಬಹುದು. ಆದರೆ ನಿಜವಾದ, ಸ್ಥಿರವಾದ, ಅಥವಾ ಚಿರಸ್ಥಾಯಿಯಾದ, ಸಮಾಜೋನ್ನತಿಯಾಗಬೇಕಾದರೆ ವಿಚಾರ ಪ್ರಗತಿಯೇ ಮುಖ್ಯವಾದ ಕಾರಣವಾಗಿರುವದು. ಅಂಥ ಯೋಗ್ಯ ವಿಚಾರಗಳನ್ನು ಸಮಾಜದ ಮುಂದೆ ಇಡತಕ್ಕ ಹೊಣೆಯು ಸಮಾಜದ ಸುವಿಚಾರಿಗಳ ಮೇಲೆ ಇರುತ್ತದೆ. ಅಂಥ ವಿಚಾರಗಳನ್ನು ನೀವು ನಿಷ್ಠೆಯುಳ್ಳವರಾಗಿ, ಧೈರ್ಯದಿಂದ ಮತ್ತು ನಿರ್ಮಲ ಮನಸ್ಸಿನಿಂದ ಸಮಾಜದಲ್ಲಿ ಹರಡುವಿರೆಂದು ನಾನು ಪೂರ್ಣ ನಂಬಿದ್ದೇನೆ. ಅಂಥ ವಿಚಾರಗಳನ್ನು ವರ್ಣಿಸುವ ಪೂರ್ವದಲ್ಲಿ ನಮ್ಮ ಸಮಾಜದ ಪೂರ್ವಸ್ಥಿತಿಯನ್ನು ಮತ್ತು ಸದ್ಯಸ್ಥಿತಿಯನ್ನು ಸ್ವಲ್ಪದರಲ್ಲಿ ವಿಹಂಗಮದೃಷ್ಟಿಯಿಂದ ಅವಲೋಕಿಸುವದು ಅಪ್ರಾಸಂಗಿಕವಾಗದೆ, ಅವಶ್ಯಕವಾಗಿರುತ್ತದೆ.

ಸರ್ವಾಂಗ ಸುಂದರವಾದ ವೀರಶೈವ ಸಮಾಜ ಘಟನೆಯು.

ವೀರಶೈವ ಸಮಾಜದ ಕಟ್ಟಡವು ಐಹಿಕ ಸುಖವನ್ನು ವರ್ಧಿಸುವ, ಮತ್ತು ಆತ್ಮೋನ್ನತಿಯನ್ನು ಹೆಚ್ಚಿಸುವ, ಹಾಗು ಬಂಧುತ್ವವನ್ನು ಪ್ರೇಮವನ್ನು ಉಂಟುಮಾಡುವ ನಿಜವಾದ ಮೂಲತತ್ವಗಳ ತಳಹದಿಯ ಮೇಲೆ ನಿರ್ಮಿಸಲ್ಪಟ್ಟಿರುತ್ತದೆಂದು ವೀರಶೈವ ಧರ್ಮಗ್ರಂಥಗಳ ಮೇಲಿಂದ ಸ್ಪಷ್ಟವಾಗಿ ಕಂಡು ಬರುತ್ತದೆ. ವರ್ಣಭೇದಗಳನ್ನು ಅಳಿಯುವ, ಮತ್ತು ಸಮಾನತ್ವವನ್ನು ಸಾರುವ, ನಿಜತತ್ವಗಳಿಂದ ಅಲಂಕೃತವಾಗಿರುವ, ಈ ವೀರಶೈವ ಸಮಾಜದ ಮೂಲ ರಚನೆಯು ಅತ್ಯಂತವಾಗಿ ರಮಣೀಯವಾದದ್ದೂ ದೋಷರಹಿತವಾದದ್ದೂ ಇರುತ್ತದೆ. ವೀರಶೈವ ಧರ್ಮದ ನಿಜತತ್ವಗಳನ್ನು ಅನುಸರಿಸಿ, ನಡೆಯುವಂಥವರಿಗೆ ಆತ್ಮೋನ್ನತಿಯನ್ನು ಐಹಿಕ ಸುಖವನ್ನೂ ಒಂದೇ ಕಾಲಕ್ಕೆ, ಆತಂಕವಿಲ್ಲದೆ, ಸಂಪಾದಿಸಲಿಕ್ಕೆ ಸಾಕಷ್ಟು ಸಾಧ್ಯವಾಗುವದು. ಹೀಗಿರುವದರಿಂದಲೇ ವೀರಶೈವ ಸಮಾಜದಲ್ಲಿ ಅನುಪಮವಾದ ಶ

ಗಳೂ ಮಹಾತತ್ವಜ್ಞಾನಿಗಳೂ, ಅತುಲವಾದ ವೀರರೂ ಮತ್ತು ರಾಜಕಾರಣ ಪಟುಗಳೂ, ವ್ಯಾಪಾರೋದ್ಯೋಗ ಶಿಖಾಮಣಿಗಳೂ ಆಗಿ ಹೋಗಿರುವರು. ಷಡಕ್ಷರ ಮೊದಲಾದ ಕವಿವರ್ಯರೂ ತತ್ವಜ್ಞಾನಿ ಶಿವಯೋಗಿಗಳಾದ ನಿಜಗುಣಾರ್ಯರೂ, ಶ್ರೀಕರ ನೀಲಕಂಠ ಭಾಷ್ಯಕಾರರೂ ವ್ಯಾಪಾರಾಗ್ರೇಸರರಾದ ಬಂಕಾಪುರದ ಸೆಟ್ಟರೂ, ಹುಬ್ಬಳ್ಳಿಯ ಒಸಪ್ಪ ಸೆಟ್ಟರೂ, ಸ್ವ. ವಾ. ರಾವಬಹದ್ದೂರ ವಾರದ ಅಪ್ಪಾಸಾಹೇಬರೂ, ರಾಜಕಾರಣ ಪಟುವಾದ ಶ್ರೀ ಬಸವೇಶನೂ, ಕೊಂಕಣ ಮೊದಲಾದ ಭಾಗಗಳೆಲ್ಲಾ ಆಳಿದ ರಾಜರೂ ಅಂದರೆ ಇಕ್ಕೇರಿಯ ರಾಜರೂ ಸ್ವಾದಿಯ, ಕೊಡಗದ, ಪುಂಗನೂರಿನ, ಅಧಿಪತಿಗಳೂ ಕಿತ್ತೂರ ಸಿರಸಂಗಿ, ಬಂಟಮುರಿ, ರಕ್ಕಸಗಿ, ಜಲಸೋಲಿ, ಮುಂತಾದ ದೇಸಮನೆತನದವರೂ ವೀರಶೈವ ಸಮಾಜದಲ್ಲಿ ಹುಟ್ಟಿ, ತಮ್ಮ ಪ್ರಭಾವವನ್ನು ತೋರಿಸಿದ್ದಲ್ಲದೆ, ವೀರಶೈವ ಸಮಾಜದ ಗೌರವವನ್ನು ಉಂಟು ಮಾಡಲಿಲ್ಲವೆ? ಅಸ್ಪೃಶ್ಯತೆಯನ್ನು ನಿವಾರಣಮಾಡುವಂಥ ವೀರಶೈವ ತತ್ವಗಳನ್ನು ಅಸ್ತಿತ್ವದಲ್ಲಿ ಬಂದುಕಾಲಕ್ಕೆ ನಮ್ಮ ಸಮಾಜದ ಸುವಿಚಾರಿಗಳು ಧೈರ್ಯದಿಂದ ಆಚರಣೆಯಲ್ಲಿ ತರಲಿಲ್ಲವೆ? ಹಾಗು ಉಚ್ಚ ನೀಚ ತರಗತಿಯನ್ನು ತಿರಸ್ಕರಿಸಿ, ಎಲ್ಲ ಪ್ರಾಮಾಣಿಕ ಉದ್ಯೋಗಗಳು ಸಮಾನವಾದವುಗಳೆಂಬುದನ್ನು ನಮ್ಮ ಧರ್ಮದ ತತ್ವಗಳೂ, ಮೂಲ ಸಮಾಜರಚನೆಯೂ, ತೋರಿಸುವದಿಲ್ಲವೆ ?

ವೀರಶೈವರು ವಾಙ್ಮಯದಲ್ಲಿ ತಮ್ಮ ಅಭಿರುಚಿಯನ್ನು ಶ್ರೇಷ್ಠತ್ವವನ್ನೂ ತೋರಿಸಿದ್ದಲ್ಲದೆ, ಕನ್ನಡಭಾಷೆಗೆ ಹೆಚ್ಚಿನ ಗೌರವವನ್ನು ತಂದು, ಅದರ ಪ್ರಸಾರವನ್ನು ವಿಶೇಷವಾಗಿ ಮಾಡಿದರು. ಒಂದು ಕಾಲಕ್ಕೆ ಕನ್ನಡ ಭಾಷೆಯ ಏಳಿಗೆಯು ವೀರಶೈವರಿಂದಾಯಿತೆಂದು ಎಲ್ಲ ಇತಿಹಾಸಕಾರರು ಉಲ್ಲೇಖಿಸುತ್ತಾರೆ. ಇಷ್ಟೇ ಅಲ್ಲದೆ, ಎಲ್ಲ ದಾನಕ್ಕಿಂತಲೂ ವಿದ್ಯಾದಾನವೇ ಶ್ರೇಷ್ಠವಾದ ದಾನವೆಂತಲೂ ವಿದ್ಯಾಪ್ರಸಾರವೇ ತಮ್ಮ ಕರ್ತವ್ಯವೆಂತಲೂ ವೀರಶೈವರ ಪೂರ್ವಜರು ತಿಳಿದು, ಅದರಂತೆ ನಡೆಯುತ್ತ ಬಂದರು. ಆದ್ದರಿಂದಲೇ ಕರ್ನಾಟಕದ ಪಟ್ಟಣಗಳಲ್ಲೆಲ್ಲಾ ಮತ್ತು ಹಳ್ಳಿಹಳ್ಳಿಗಳಲ್ಲಿ ಸಹ ವಿದ್ಯಾಪ್ರಸಾರವು ವೀರಶೈವರಿಂದ ಮಾಡಲ್ಪಡುತ್ತಿತ್ತು. ಎಲ್ಲಿ ನೋಡಿದರೂ ಕರ್ನಾಟಕದಲ್ಲಿ ಪ್ರಾಥಮಿಕ ಶಾಲೆಗಳ ಚಾಲಕರು ವೀರಶೈವರೇ ಇದ್ದರು. ಎಲ್ಲಿ ನೋಡಿದಲ್ಲಿ ಓದಿಸುವ ಮಠಗಳು ಕಂಡು ಬರುತ್ತಿದ್ದವು,

ವಿದ್ಯಾಪ್ರಸಾರವು ಮತ್ತು ವಿದ್ಯಾಪ್ರಸಾರ ಮಾಡುವ ಶಾಲೆಗಳು ಎಷ್ಟರಮಟ್ಟಿಗೆ ವೀರಶೈವರ ಕೈಯಲ್ಲಿ ಇದ್ದವೆಂಬುದು ಕೆಳಗೆ ವಿವರಿಸಿದ ಎರಡು ಕಟ್ಟುಗಳಿಂದ ವ್ಯಕ್ತವಾಗುತ್ತದೆ. ಶಿಕ್ಷಕರಿಗೆ ಅಯ್ಯನವರೆಂತಲೂ, ಶಾಲೆಗಳಿಗೆ ಮಠಗಳೆಂತಲೂ, ರೂಢಿಯಲ್ಲಿ ಒಂದು ಬಿಟ್ಟಿದ್ದವು. ಈ ಎರಡು ಕಟ್ಟುಗಳ ರೂಢಿಯಮೇಲಿಂದ ವೀರಶೈವರೇ ಮುಖ್ಯತಃ ವಿದ್ಯಾ ಪ್ರಸಾರವನ್ನು ಮಾಡಿದರೆಂದು ಖಂಡಿತವಾಗಿ ಕಂಡು ಬರುತ್ತದೆ. ಇನ್ನೊಂದು ಮಹತ್ವದ ಸಂಗತಿಯು ಏನೆಂದರೆ, ಈ ಶಾಲೆಗಳು ಅಥವಾ ಓದಿಸುವ ಮಠಗಳು, ಸರಕಾರದ ಆಗ್ರಹದಿಂದ ಅಥವಾ ಉತ್ತೇಜನೆಯಿಂದ ಪ್ರಾರಂಭಿಸಿದಂಥವು ಅಥವಾ ನಡೆಯಿಸಿದ್ದವು ಇದ್ದಿಲ್ಲ. ಇವರೆ ಕೇವಲ ಸ್ವಾರ್ಥತ್ಯಾಗದಿಂದಲೂ ವಿದ್ಯಾಭಿರುಚಿಯಿಂದಲೂ ಮತ್ತು ವಿದ್ಯಾಭಿರುಚಿಯು ಜನರಲ್ಲಿ ಪ್ರಸಾರವಾಗಬೇಕೆಂಬ ಸದಿಚ್ಛೆಯಿಂದ ಮತ್ತು ಪರೋಪಕಾರ ಬುದ್ಧಿಯಿಂದ, ಕೇವಲ ದೇಶಕಲ್ಯಾಣವಾಗಬೇಕೆಂಬ ಹೇತುವಿನಿಂದ, ಬಿಟ್ಟಿಗೆ ಅಜ್ಞಾನವನ್ನು ದೂರೀಕರಿಸುವ ಉದಾತ್ತ ವಿಚಾರದಿಂದ, ವಿದ್ಯಾಪ್ರಸಾರವನ್ನು ಮಾಡುವ ಪ್ರಯತ್ನವನ್ನು ಮತ್ತು ಭಾರವನ್ನು ವೀರಶೈವರು ಅತ್ಯ ಸಂತೋಷದಿಂದ ಬೇಸರಿಕೆಯಿಲ್ಲದೆ ಕೈಕೊಂಡಿದ್ದರು. ಮತ್ತು ನಡೆಯಿಸುತ್ತ ಬಂದಿದ್ದರು.

ಧರ್ಮಕಾರ್ಯಗಳನ್ನು ಉದಾರತನದಲ್ಲಿ ಮಾಡತಕ್ಕಂಥ ಜನಾಂಗಗಳು ಎಂದೂ ಬರದ ಹಾಗೆ ವೀರಶೈವರು ಇದ್ದಿಲ್ಲ. ಮಠಗಳು ತಂಗೊಳಿಸುತ್ತವೆ. ಮುಖ್ಯತಃ ಸಾಮಾಜಿಕ ಶ್ರಮದಲ್ಲಿ ಅಥವಾ ಉದ್ಯೋಗದಲ್ಲಿ ಉಚ್ಚನೀಚ ಭಾವವನ್ನು ಕಲ್ಪಿಸದೆ, ಶ್ರಮ ಗೌರವವನ್ನು ಪ್ರತಿಪಾದಿಸಿ, ಅದರಂತೆ ಆಚರಿಸಿದ್ದರಿಂದ ಆರ್ಥಿಕ ಸಂಪತ್ತಿಯು ಸಾಕಷ್ಟು ಇರುತ್ತಾಬಂತು. ಕೃಷಿಕರ್ಮದಲ್ಲಾಗಲಿ ಕೈಗಾರಿಕೆಯ ಉದ್ಯೋಗಗಳಲ್ಲಾಗಲಿ ಅಥವಾ ವ್ಯಾಪಾರದಲ್ಲಾಗಲಿ ವೀರಶೈವರೇ ಮುಂದುವರಿದ ಪಂಕ್ತಿಯವರಾಗಿದ್ದರು.

ಸಮಾಜ ಶಿಥಿಲತೆಯ ಕಾರಣಗಳು.

ಧರ್ಮದ ಮುಖ್ಯ ತತ್ವಗಳನ್ನೂ ಅವುಗಳ ಅರ್ಥಗಳನ್ನೂ ತಪ್ಪು ತಿಳುವಳಿಕೆ ಮಾಡಿಕೊಂಡು, ಮೊದಲಿನಂತೆ ಸಾಧನವನ್ನು ಮಾಡದೆ ಇದ್ದುದರಿಂದ, ನಮ್ಮ ಆರ್ಥಿಕ ಬೆಳವಣಿಗೆಯು ಕಡಿಮೆಯಾಗಲಿಕ್ಕೆ ಹತ್ತಿದ್ದಲ್ಲದೆ, ಬರಬರುತ್ತ ಆರ್ಥಿಕ ಸ್ಥಿತಿಯು ಕಡೆಗೆ ನಮ್ಮ ಸಮಾಜದ ಅಸ್ತಿತ್ವವೇ ಕೂಡ ಕಡಿಮೆಯಾಗುತ್ತ ನಡೆದಿರುತ್ತದೆ. ಎತ್ತ

ನೋಡಿದಷ್ಟು ಪರಪಡೆಗಳೂ ಪುಸ್ತಕವಾದಗಳೂ ಮನಸ್ತಾಪಗಳೂ ನಿಷ್ಫಲವಾದ ಚಿಂತೆಗಳೂ ತಲೆದೋರುತ್ತಿರುತ್ತವೆ. ಜಗತ್ತಿನ ಸದ್ಯಸ್ಥಿತಿಯಲ್ಲಿ ದಿನದಿನಕ್ಕೂ ಉಪಜೀವನಮಾರ್ಗಗಳು ಹೆಚ್ಚು ಹೆಚ್ಚು ಕಠಿಣವಾಗುತ್ತಾ ನಡೆದಿರುತ್ತವೆಂಬ ಸಂಗತಿಯನ್ನು ನಮ್ಮ ಸಮಾಜವು ಮರೆಯುತ್ತ, ಅದಕ್ಕೆ ಉಪಾಯ ಚಿಂತನೆಯನ್ನು ಮಾಡುವ ಗೋಜಿಗೆ ಹೋಗದೆ, 'ನಾ ಹೆಚ್ಚು' 'ನನ್ನ ಜನವು ಹೆಚ್ಚು,' 'ನನ್ನ ವರ್ಗವು ಹೆಚ್ಚು,' ಈ ಮೊದಲಾದ ಪುಸ್ತಕವಾದಗಳಲ್ಲಿ ಸಮಾಜದ ವೇಳೆಯೂ ಅರ್ಥವೂ ಹಾನಿಯಾಗುತ್ತಾ ನಡೆದಿರುತ್ತದೆ. ಸಮಾಜದಲ್ಲಿ ಅನವಶ್ಯಕವಾದ ಅಥವಾ ನಿರಾಧಾರವಾದ ವರ್ಗಗಳನ್ನು ಮತ್ತು ಭೇದಗಳನ್ನುಂಟುಮಾಡುವ, ಅಥವಾ ಹೆಚ್ಚಿಸುವ ಅಯೋಗ್ಯವಾದ ಚಳವಳಿಗಳು ಬಲವತ್ತರವಾಗುತ್ತಾ ನಡೆಯುತ್ತವೆ. ಸಮಾಜದ ಏಳಿಗೆಯನ್ನು ಅಥವಾ ಹಿತವನ್ನು ಲಕ್ಷಿಸದೆ ಹಟದಿಂದ ಭೇದಗಳನ್ನು ವರ್ಗಗಳನ್ನು ಹುಟ್ಟಿಸುವದು ಅಥವಾ ಬಲಿಸುವದು ಸಮಾಜದ ಏಳಿಗೆಗೆ ದೊಡ್ಡ ವಿಘ್ನವುಂಟಾಗುತ್ತದೆ.

ಆಗಾಗ್ಗೆ ಉದಯಿಸಿದ ಶುಭಚಿಹ್ನಗಳು.

ಈ ಪ್ರಕಾರದ ವಸ್ತುಸ್ಥಿತಿಯಲ್ಲಿ, ಸಮಾಜದ ಸ್ಥಿತಿಯು ನಿರಾಶಾಜನಕವಾಗಿ ತೋರಿದರೂ ಸಮಾಜದ ಶೋಚನೀಯಸ್ಥಿತಿಯನ್ನು ಹೋಗಲಾಡಿಸಲಿಕ್ಕೆ ಕಾಲಕಾಲಕ್ಕೆ ಸಮಾಜದ ಕೆಲವು ಮಹಾಪುರುಷರು ಮಾಡಿದ ಪ್ರಯತ್ನಗಳನ್ನೂ ಕೃತಿಗಳನ್ನೂ ಈ ಸಂದರ್ಭದಲ್ಲಿ ನಾನು ಮರೆಯದೆ ಇರಲಾರೆನು. ಮುಂಬೈ ಕರ್ನಾಟಕದೊಳಗೆ ವಿದ್ಯಾಪ್ರಸಾರ, ಸಮಾಜ ಸೇವೆಗಳಲ್ಲಿಯೂ ಮೊದಲನೆಯವರೆಂದೆನಿಸಿದ ಕೈಲಾಸವಾಸಿ ಡೆ. ಎ. ಇನಸ್ಪೇಕ್ಟರ ಧಾರವಾಡ ಚನ್ನಬಸಪ್ಪನವರು ಮಾಡಿದ ವ್ಯವಸ್ಥೆಯೂ ರಾವಬಹದ್ದೂರ ಅರಟಾಳ ಆರ್. ಎಸ್. ಬಿ. ಸಾಹೇಬರು ಮತ್ತು ಕೈಲಾಸವಾಸಿ ರಾ. ಬ. ಗಿಲಗಂಚಿ ಗುರುಸಿದ್ಧಪ್ಪನವರು ನಿರ್ಮಾಣಮಾಡಿದ ಲಿಂಗಾಯತ ವಿದ್ಯಾವರ್ಧಕ ಫಂಡ, ಮತ್ತು ಅದರ ವ್ಯವಸ್ಥೆಯೂ ಬೆಂಗಳೂರಲ್ಲಿಯ ವಿದ್ಯಾವರ್ಧಕ ಫಂಡೂ, ಹಿಂದಕ್ಕೆ ಚಿತ್ರಕಲ್ಲದುರ್ಗದ ಶ್ರೀಮನ್ನಿರಂಜನ ಜಗದ್ಗುರು ಮಹಾಲಿಂಗ ಸ್ವಾಮಿಗಳು ನಿರ್ಮಾಣಮಾಡಿದ ಬೋರ್ಡಿಂಗೂ, ಸದ್ಯಕ್ಕೆ ಧಾರವಾಡದಲ್ಲಿ ನಡೆಯುತ್ತಿರುವ ಶ್ರೀ ಮೃತ್ಯುಂಜಯ ಸ್ವಾಮಿಗಳವರ ವಿದ್ಯಾರ್ಥಿನಿಲಯವೂ, ಬೆಂಗಳೂರ

ಪಟ್ಟಣದಲ್ಲಿರುವ ಒಂದೇ ಒಂದರ ವಿದ್ಯಾರ್ಥಿನಿಲಯವು, ಬೆಳಗಾವಿ, ಧಾರವಾಡ ಪಟ್ಟಣಗಳಲ್ಲಿಯ ಗಿಲಗಂಚಿ ಅರಟಾಳ ಹಾಯಸ್ಕೂಲಗಳ ಚಾಲಕರ ಸ್ವಾರ್ಥತ್ಯಾಗವು ಪ್ರಯತ್ನವೂ ಅದರಂತೆಯೇ ವಿಜಾಪುರ, ಬಾಗಲಕೋಟೆಗಳಲ್ಲಿ ನಡೆಯುವ ಹಾಯಸ್ಕೂಲಗಳೂ ನಮ್ಮ ಸಮಾಜದಲ್ಲಿ ಪುನರುಜ್ಜೀವನ ಮಾಡುವ ಸಾಧನದನ್ನು ಶಕ್ತಿಯನ್ನು ತೋರಿಸುವಂಥವುಗಳಾಗಿರುತ್ತವೆ.

ಪ್ರಯತ್ನಗಳು ಮತ್ತು ಕೃತಿಗಳು.

ಅದರಂತೆಯೇ ರಾಜಕೀಯ ವಿಷಯಗಳಲ್ಲಿಯೂ ನಮ್ಮ ಸಮಾಜವು ಇತ್ತೀಚಿಗಾಗಿ ದಿನೇ ದಿನೇ ಹೆಚ್ಚು ಮನಸ್ಸು ಹಾಕುತ್ತಿರುವದು ಶ್ರೇಯಸ್ಕರವಾದ ಮಾತಾಗಿರುವದು. ಕಾಯಿದೆ ಕೌನ್ಸಿಲ್ಲುಗಳಲ್ಲಿ ಮತ್ತು ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ವಿಷಯಗಳಲ್ಲಿ ಸಮಾಜದ ಅಲ್ಲಲ್ಲಿಯ ಮುಂದಾಳುಗಳು ಹೆಚ್ಚು ಹೆಚ್ಚು ಲಕ್ಷ್ಯ ಕೊಡುವದನ್ನು ನೋಡಿ, ಅತ್ಯಾನಂದವಾಗುತ್ತದೆ. ಮುಂಬಯಿ ಕಾಯಿದೆ ಕೌನ್ಸಿಲದಲ್ಲಿ ವೀರಶೈವ ಸಮಾಜದ ಐವರು ಪ್ರತಿನಿಧಿಗಳಿರುತ್ತಾರೆ. ಸ್ವರಾಜ್ಯ ಸಂಸ್ಥೆಗಳಲ್ಲಿ ಅಂದರೆ ಮ್ಯುನಿಸಿಪಾಲಿಟಿ ತಾಲೂಕ ಹಾಗು ಡಿಸ್ಟ್ರಿಕ್ಟ ಲೋಕಲ್ ಬೋರ್ಡುಗಳಲ್ಲಿ ಹೆಚ್ಚು ಹೆಚ್ಚು ಜನರು ಸೇರಿ, ಆಡಳಿತೆಯ ಸೂತ್ರಗಳನ್ನು ನಮ್ಮ ಸಮಾಜದ ಮುಂದಾಳುಗಳು ತಮ್ಮ ಕೈಯಲ್ಲಿಟ್ಟುಕೊಂಡು ಆಡಳಿತೆಯ ಜ್ಞಾನವನ್ನು ಸಂಪಾದಿಸುತ್ತಾ ನಡೆದಿರುತ್ತಾರೆ. ಕರ್ನಾಟಕದ ಏಕೀಕರಣ ವಿಷಯಕ್ಕೆ ಮನಃಪೂರ್ವಕ ಪ್ರಯತ್ನ ಮಾಡುತ್ತಿದ್ದಾರೆ. ಈ ಬಗ್ಗೆ ಬೆಳಗಾವಿ, ಬಳ್ಳಾರಿಯಲ್ಲಿ ಎರಡು ದೊಡ್ಡ ಸಭೆಗಳಾಗಿದ್ದು ಅವುಗಳ ಅಧ್ಯಕ್ಷಸ್ಥಾನವನ್ನು ನಮ್ಮ ಸಮಾಜದ ಪ್ರಮುಖರಲ್ಲಿಯವರೇ ವಹಿಸಿದ್ದರು. ರಾಜ್ಯಕಾರಭಾರವನ್ನು ನಡೆಸುವದರಲ್ಲಿಯೂ ರಾಜ್ಯಕಾರಭಾರದ ಜ್ಞಾನವು ದೊರೆಯುವಂಥ ನವಕರಿಗಳಲ್ಲಿಯೂ ನಮ್ಮ ಸಮಾಜದ ತೀರ ಕಡಿಮೆ ಜನರು ಇದ್ದರೂ ಅಂಥ ನವಕರಿಗಳಲ್ಲಿ ಕೆಲಸಮಾಡುವದಕ್ಕೆ ಅನೇಕ ಜನರು ಆತುರತೆಯುಳ್ಳವರಾಗಿದ್ದಾರೆ. ಅರ್ಥಾತ್ ಆಡಳಿತೆಯಲ್ಲಿಯೂ ರಾಜ್ಯಕಾರಭಾರದಲ್ಲಿಯೂ ಹೆಚ್ಚು ಹೆಚ್ಚು ಜನರು ಸೇರಬೇಕೆಂಬ ಮತ್ತು ಅವುಗಳಲ್ಲಿ ಹೆಚ್ಚು ಭಾಗತೆಗೆದುಕೊಳ್ಳಬೇಕೆಂಬ ಉದಾತ್ತವಾದ ಆಕಾಂಕ್ಷೆಯು ನಮ್ಮ ಸಮಾಜದಲ್ಲಿ ಉತ್ಪನ್ನವಾಗಿರುತ್ತದೆ. ಜ್ಞಾನಪ್ರಸಾರವನ್ನು ವರ್ತಮಾನ ಪತ್ರಗಳ ಹಾಗೂ ಮಾಸಪತ್ರಿಕೆಗಳ ರೂಪದಿಂದಮಾಡುವದಕ್ಕೆ ನಮ್ಮ ಸಮಾಜದಲ್ಲಿ ಹೆಚ್ಚು ಹೆಚ್ಚು ಪ್ರಯತ್ನಗಳು ನಡೆದಿರುತ್ತವೆ.

ಭರತ ಖಂಡದಲ್ಲಿ ವೀರಶೈವರು ಇರತಕ್ಕ ಸ್ಥಳಗಳು ಮತ್ತು ಅವರ ವ್ಯವಸಾಯಗಳು.

ಮುಂಬೈ (ಸೊಲ್ಲಾಪುರ ಜಿಲ್ಲೆ ಮೊದಲ್ಗೊಂಡು) ಕರ್ನಾಟಕದಲ್ಲಿಯೂ ಮದ್ರಾಸ ಇಲಾಖೆಯೊಳಗಿನ ದಕ್ಷಿಣ ಕನ್ನಡ, ಬಳ್ಳಾರಿ, ಮತ್ತು ಕೊಯಿಮುತ್ತೂರ ಜಿಲ್ಲೆಗಳಲ್ಲಿಯೂ ಕೊಡಗು ಪ್ರಾಂತದಲ್ಲಿಯೂ ಮೈಸೂರು ಸಂಸ್ಥಾನದಲ್ಲಿಯೂ, ನಿಜಾಮ ರಾಜ್ಯದ ಪಶ್ಚಿಮ ದಕ್ಷಿಣಭಾಗಗಳಲ್ಲಿಯೂ ವೀರಶೈವರು ವಿಶೇಷವಾಗಿರುತ್ತಾರೆ. ಇದಲ್ಲದೆ, ಮುಂಬೈ ಇಲಾಖೆಯ ಮಧ್ಯಭಾಗದಲ್ಲಿಯೂ ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಲ್ಲಿಯೂ ವರ್‍ಹಾಡ ಪ್ರಾಂತದ ಕೆಲವು ಭಾಗದಲ್ಲಿಯೂ ಕೆಲವು ಜನರು ಇರುತ್ತಾರೆ. ಹಿಂದುಸ್ತಾನದ ಉತ್ತರಭಾಗದ ಕಾಶಿ, ಮತ್ತು ಕೇದಾರದಲ್ಲಿ ಎರಡು ಪೀಠಗಳಿದ್ದು, ಅಲ್ಲಿ ವೀರಶೈವರ ವಸತಿಯು ಹೇಳುವಷ್ಟು ಇಲ್ಲದ್ದು ಆಶ್ಚರ್ಯಕರವಾದ ಸಂಗತಿಯಾಗಿರುತ್ತದೆ.

ಒಕ್ಕಲತನ ಮತ್ತು ವ್ಯಾಪಾರವು ಇವರ ಮುಖ್ಯ ಉದ್ಯೋಗವಾಗಿರುತ್ತವೆ. ನೇಯುವ ಮೊದಲಾದ ಕೈಗಾರಿಕೆಯ ಕೆಲಸದಲ್ಲಿರುತ್ತಾರೆ. ಪಾಶ್ಚಾತ್ಯ ವಿದ್ಯೆಯ ಸಂಪರ್ಕದಿಂದ ವಕೀಲಿ, ಮತ್ತು ವೈದ್ಯಕಿ, ಉದ್ಯೋಗಗಳನ್ನು ಮಾಡಹತ್ತಿದ್ದಾರೆ. ಸುಮಾರು ಎಪ್ಪತ್ತೈದು ಜನರು ಮುಂಬೈ ಕರ್ನಾಟಕದಲ್ಲಿ ವಕೀಲಿಯ ಕೆಲಸವನ್ನು ಮಾಡುತ್ತಿರುತ್ತಾರೆ. ಅದರಂತೆ ಮೈಸೂರ ನೈಜಾಮ ಸಂಸ್ಥಾನಗಳಲ್ಲಿ ವಕೀಲರು ಇರುತ್ತಾರೆ. ಆದರೂ ಭರತಖಂಡದಲ್ಲಿ ಒಟ್ಟು ವೀರಶೈವರ ಜನಸಂಖ್ಯೆಯು ೩೫ ಲಕ್ಷ ಇದ್ದು, ರಾಜಕೀಯ ವಿಷಯದಲ್ಲಿ ಸಾಕಷ್ಟು ಮುಂದರಿವಿಲ್ಲವೆಂಬದನ್ನು ನಾವೆಲ್ಲರೂ ಲಕ್ಷ್ಯದಲ್ಲಿಡತಕ್ಕ ಮಾತಾಗಿರುವದು. ಸಾಮಾಜಿಕ ರಾಜಕೀಯ ವ್ಯಾವಹಾರಿಕ, ಇತ್ಯಾದಿ ಕ್ಷೇತ್ರಗಳಲ್ಲಿ ವೀರಶೈವ ಸಮಾಜವು ಮುಂದರಿಯಲಿಕ್ಕೆ ಸಾಕಷ್ಟು ಅವಶ್ಯವಿರುತ್ತದೆ. ಹಿಂದುಸ್ತಾನದಲ್ಲಿಯ ಬಹುತರ ಎಲ್ಲ ಸಮಾಜಗಳು ಈ ಎಲ್ಲ ಕ್ಷೇತ್ರಗಳಲ್ಲಿ ಮುಂದರಿಯಲಿಕ್ಕೆ ದೀರ್ಘಪ್ರಯತ್ನವನ್ನು ಮಾಡಹತ್ತಿರುತ್ತವೆ. ಇದು ಅಭಿನಂದನೀಯವಾದ ಸಂಗತಿಯಾಗಿರುತ್ತದೆ. ಹಿಂದುಸ್ತಾನದಲ್ಲಿರುವ ಎಲ್ಲ ಸಮಾಜಗಳು ಮುಂದರಿಯಲಿಕ್ಕೆ ಮತ್ತು ಸುಧಾರಿಸಲಿಕ್ಕೆ ಪ್ರಯತ್ನಮಾಡುವದೆಂದರೆ ಹಿಂದುಸ್ತಾನದಲ್ಲಿರುವ ಎಲ್ಲ ಜನರು ಇಡೀ ಹಿಂದುಸ್ತಾನದ ಪ್ರಗತಿಗೇನೇ ಸಹಾಯ ಮಾಡಿದಂತಾಗುತ್ತದೆ. ಹಿಂದುಸ್ತಾನದಲ್ಲಿಯ ಯಾವ

ಯಾವದೊಂದು ಸಮಾಜವು ಹಿಂದುಳಿದರೆ ಅಥವಾ ನಿರ್ಬಲವಾದರೆ ಹಿಂದುಸ್ಥಾನದ ಪ್ರಗತಿಗೆ ಅಷ್ಟರ ಮಟ್ಟಿಗೆ ಒಂದು ತರಹದ ವಿಘ್ನವು ಬಂದಂತಾಗುತ್ತದೆ. ಇಡೀ ಹಿಂದುಸ್ಥಾನವು ಸ್ವರಾಜ್ಯ ಸಂಪಾದಿಸಬೇಕೆಂತಲೂ ಆದರಂತೆ ಸ್ವರಾಜ್ಯಕ್ಕೆ ಹಿಂದುಸ್ಥಾನದ ಜನರೆಲ್ಲರೂ ಅರ್ಹರಿರುತ್ತಾರೆಂತಲೂ ಮತ್ತು ಬಡವರಿಗೆ ಹೊಟ್ಟೆಗೆ ಆಹಾರ ದೊರಕಲಿಕ್ಕೆ ಹತ್ತಿರುವದೆಂತಲೂ ಹಿಂದುಸ್ಥಾನದ ಮುಖಂಡರು ಘಂಟಾಘೋಷದಿಂದ ಸಾರುತ್ತಿರುವದು ಸರ್ವಶ್ರುತವಾದ ಸಂಗತಿಯಾಗಿರುತ್ತದೆ. ಆದ್ದರಿಂದ ನಮ್ಮ ಸಮಾಜದಲ್ಲಿ ಯಾವ ಕಾರಣದಿಂದಲೂ ಹಿಂದುಸ್ಥಾನದ ಈ ಪ್ರಯತ್ನಕ್ಕೆ ವಿಘ್ನ ಬರದಂತೆ ಅಥವಾ ಅಡ್ಡಿಯಾಗದಂತೆ ಪ್ರಯತ್ನಮಾಡುವದು ನಮ್ಮ ಸಮಾಜದ ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯವಾಗಿರುತ್ತದೆ. ಹಾಗೆಯೇ ಹಿಂದುಸ್ಥಾನದ ಈಗಿನ ಪರಿಸ್ಥಿತಿಯನ್ನು, ಇಡೀ ಹಿಂದುಸ್ಥಾನವು ಮಾಡುತ್ತಿರುವ ಪ್ರಯತ್ನವನ್ನು ನೋಡಿಕೊಂಡು ಅವೆಲ್ಲವು ಸಫಲವಾಗುವಂತೆ ಸಹಾಯಮಾಡುವದೂ ಮತ್ತು ನಾವೆಲ್ಲರು ಸ್ವರಾಜ್ಯಕ್ಕೆ ಅರ್ಹರಾಗಲಿಕ್ಕೆ ಪ್ರಯತ್ನಿಸುವದೂ ಅವಶ್ಯವಾದದ್ದು. ಈ ವಿಷಯಗಳೆಲ್ಲವನ್ನು ಚನ್ನಾಗಿ ಅರಿತುಕೊಂಡು, ನಮ್ಮ ಸಮಾಜವು ವರ್ತಿಸಲಿಕ್ಕೆ ಬೇಕು, ಮುಖ್ಯವಾಗಿ ಹಿಂದುಸ್ಥಾನದ ಸದ್ಯದ ಸ್ಥಿತಿಗೂ, ಹಿಂದುಸ್ಥಾನದ ಪ್ರಾಚೀನ ಸ್ಥಿತಿಗೂ, ಬಹಳ ಅಂತರವಿರುತ್ತದೆಂಬ ಸಂಗತಿಯನ್ನು ನಮ್ಮ ವೀರಶೈವ ಸಮಾಜವು ಲಕ್ಷ್ಯದಲ್ಲಿಡತಕ್ಕದ್ದು. ಈ ಬದಲಾಯಿಸಿದ ಸ್ಥಿತಿಯಲ್ಲಿದ್ದ ಹಿಂದುಸ್ಥಾನದ ಧ್ಯೇಯವನ್ನು ನಾವೆಲ್ಲರು ಯಾವಾಗಲೂ ಕಣ್ಣಿನ ಮುಂದೆ ಇಟ್ಟುಕೊಂಡು ನಡೆಯತಕ್ಕದ್ದು. ನಮ್ಮ ಸಮಾಜದ ಸ್ಥಿತಿಯನ್ನು ಸುಧಾರಿಸುವ ಮತ್ತು ಹಿಂದುಸ್ಥಾನದ ಪ್ರಗತಿಗೆ ಸಹಾಯ ಮಾಡುವ, ವಿಷಯಗಳಲ್ಲಿ ವೀರಶೈವರು ಎಷ್ಟು ವಿಮುಖತೆಯನ್ನು ಉದಾಸೀನತೆಯನ್ನು ತೋರಿಸದೆ, ಅವುಗಳಲ್ಲಿ ಪ್ರವೃತ್ತರಾಗುವದೇ ನಮ್ಮ ಮುಖ್ಯ ಕರ್ತವ್ಯವೆಂದು ತಿಳಿದುಕೊಳ್ಳಬೇಕು. ಹೀಗೆ ಮಾಡಬೇಕಾದರೆ ಮುಖ್ಯವಾದ ಎರಡು ವಿಷಯಗಳ ಕಡೆಗೆ ಒಂದೇ ಕಾಲಕ್ಕೆ ಲಕ್ಷ್ಯ ಕೊಡಬೇಕಾಗುತ್ತದೆ. ಸಮಾಜದ ದೋಷಗಳನ್ನು ಕಂಡು ಹಿಡಿದು, ಅವೆಲ್ಲವನ್ನು ತೆಗೆದುಹಾಕಿ, ಸಮಾಜದ ಸಂಘಟನೆಯನ್ನು ಹೆಚ್ಚಿಸುವ ಉಪಾಯಗಳನ್ನು ಕಂಡುಕೊಂಡು, ಅವುಗಳನ್ನು ಆಚರಣೆಯಲ್ಲಿ ತರುವದು ಮೊದಲನೆಯ ಪ್ರಯತ್ನವು. ಅದರಂತೆಯೇ ಹಿಂದುಸ್ಥಾನದ ಅಂತಿಮ ಧ್ಯೇಯಕ್ಕೆ ಅನುಕೂಲವಾಗಿ, ಹಿಂದುಸ್ಥಾನದ ಪ್ರಗತಿಗೆ ಸಹಾಯವಾಗುವಂತೆ ನಡೆಯುವದು ಎರಡನೇ ಪ್ರಯತ್ನವು. ಈ ಎರಡೂ ಪ್ರಯತ್ನಗಳು ಏಕ ಕಾಲಕ್ಕೆಯೇ ಆಗಲಿಕ್ಕೆ ಬೇಕು. ಇವೆರಡೂ ಪ್ರಯತ್ನಗಳಲ್ಲಿ

ಪರಸ್ಪರ ವಿರೋಧಭಾಸವಿದ್ದರೂ ಇವು ಒಂದಕ್ಕೊಂದು ಪೂರಕಪ್ರಾಯವಾಗಿರುತ್ತವೆ. ಅಂತಿಮ ಸಾಧ್ಯದಷ್ಟೇ ಮಹತ್ವವು ಈ ಪ್ರಯತ್ನಗಳಿಗೂ ಇರುತ್ತದೆ.

ವಿಚಾರ ಪ್ರಗತಿಯು.

ಸಮಾಜದ ಉನ್ನತಿಯಾಗಿ ದೇಶೋದ್ಧಾರವಾಗಬೇಕಾದರೆ ವ್ಯಾಪಾರ ಉದ್ಯೋಗ, ಶಿಕ್ಷಣ, ರಾಜ್ಯಕಾರಭಾರ ಜ್ಞಾನ ಇವುಗಳಲ್ಲಿ ಮುಖ್ಯವಾಗಿ ನಾವು ಮುಂದರಿಯಲಿಕ್ಕೆ ಬೇಕು. ಈ ನಾನಾ ಕ್ಷೇತ್ರಗಳಲ್ಲಿ ಮುಂದರಿಯಬೇಕಾದರೆ ನಮ್ಮ ಹಳೇ ಕಲ್ಪನೆಗಳನ್ನು ಬದಲಾಯಿಸಲಿಕ್ಕೆ ಬೇಕು. ಕಾಲಕ್ಕನುಸರಿಸಿ, ನಾವು ನಡೆಯಲಿಕ್ಕೆಬೇಕು. ಬರೇ ಭೂತಕಾಲದ ಕಡೆಗೆ ಲಕ್ಷ್ಯವನ್ನಿಟ್ಟು, ಪೂರ್ವಜರು ಮಾಡಿದ ಕೃತಿಗಳನ್ನು ವರ್ಣಿಸುವದರಿಂದಲೇ ನಮ್ಮ ಪ್ರಗತಿಯು ಉಂಟಾಗುವದಿಲ್ಲ. ಹಿಂದಿನಕಾಲದ ಇತಿಹಾಸದ ಜ್ಞಾನವು ಅವಶ್ಯವಿದ್ದರೂ, ಅದರ ಮೇಲೆಯೇ ಅವಲಂಬಿಸಿದರೆ ನಮ್ಮ ಸ್ಥಿರ ಪ್ರಗತಿಯು ಉಂಟಾಗುವದಿಲ್ಲ. ಈಗಿನ ಮತ್ತು ಭಾವೀ ಕಾಲವನ್ನು ಲಕ್ಷಿಸಿ, ನಾವು ನಮ್ಮ ಕಲ್ಪನೆಗಳನ್ನೂ ವಿಚಾರಗಳನ್ನೂ ಕಟ್ಟುಗೊಳಿಸಬೇಕು. ಹೀಗೆ ಮಾಡದಿದ್ದರೆ, ನಮಗೆ ತಿಳಿಯದಂತೆ ಸಮಾಜದ ಅಧೋಗತಿಯು ದಿನೇ ದಿನೇ ಉಂಟಾಗುವದು. ನಮ್ಮ ದೇಶದ ಮತ್ತು ಪರರಾಷ್ಟ್ರಗಳ ಪರಿಸ್ಥಿತಿಯನ್ನು ಯಾವಾಗಲೂ ಪರೀಕ್ಷಿಸುತ್ತಿರಬೇಕು. ಸರ್ವತೋ ದೃಷ್ಟಿಯಿಂದ ನಮ್ಮ ವಿಚಾರವನ್ನು ತಯಾರ ಮಾಡಿ, ಆ ಪೂರ್ಣ ವಿಚಾರಗಳ ಬೆಳಕನ್ನನುಸರಿಸಿ ನಮ್ಮ ಕೃತಿಗಳನ್ನು ಮಾಡಬೇಕು. ಉದಾಹರಣಾರ್ಥವಾಗಿ, ನಮ್ಮ ಪೂರ್ವಜರು ಎತ್ತಿನಮೇಲೆ ಸಾಲಗೆಗಳನ್ನು ಹೇರಿ, ವ್ಯಾಪಾರವನ್ನು ಮಾಡುತ್ತಿದ್ದರು. ಅದರಿಂದ ಅವರ ವ್ಯಾಪಾರವೂ ಪರಮಾರ್ಥವೂ ಸುಕ್ಷೇಮವಾಗಿ, ಆತಂಕವಿಲ್ಲದೆ ನಡೆಯುತ್ತಿತ್ತು. ಅದರಂತೆಯೇ ಈಗ ನಡೆಯಹೋಗಿ, ಪ್ರಸ್ತುತದ ಪ್ರಗತಿಯ ಯುಗದಲ್ಲಿ ಮತ್ತು ಜಾರಿಯಲ್ಲಿರುವ ರೈಲು, ಮೋಟಾರ, ಆಕಾಶಯಾನ, ಸ್ಟೀಮರ, ಇವುಗಳನ್ನು ಸ್ವಮತಾದ ರೀತಿಯಿಂದ ನಾವು ಉಪಯೋಗಿಸದಿದ್ದರೆ ನಮ್ಮ ಗತಿಯು ಕುಂಠಿತವಾಗುವದು. ಇದೊಂದೇ ಉದಾಹರಣೆಯು ಮೇಲಿಂದ ನಮ್ಮ ವಿಚಾರಗಳಲ್ಲಿ ಬದಲು ಮಾಡುವದು ಎಷ್ಟು ಅವಶ್ಯವಿರುತ್ತದೆಂಬುದು ಸ್ಪಷ್ಟವಾಗಿ ತಿಳಿಯುವದು. ನಮ್ಮ ಸಮಾಜದ ಆರ್ಥಿಕಸ್ಥಿತಿಯು ವೃದ್ಧಿಯಾಗಬೇಕಾದರೆ ನಮ್ಮ ವಿಚಾರ ಕೋಶ ಪ್ರ [illegible]ವ್ಯದ ವ್ಯಾಪಾರದ ಸ್ಥಿತಿಗೆ ಅನುಸರಿಸಿ, ಬದಲು ಆಗಲಿಕ್ಕೆಬೇಕು.

ಹಿಂದುಸ್ಥಾನದ ಮುಖ್ಯ ಬಂದರಗಳಲ್ಲಿ ನಮ್ಮ ಸಮಾಜದ ವ್ಯಾಪಾರಸ್ಥರು ವಸಾಹತ ಮಾಡುವ ಆವಶ್ಯಕತೆ.

ಕಾರವಾರ ಬಂದರವು ಇರುವವರೆಗೆ ನಮ್ಮ ಸಮಾಜವು ವ್ಯಾಪಾರದ ಮೇ ತ್ತಿಯಲ್ಲಿತ್ತು; ಕಾರವಾರ ಬಂದರವು ಮುರಿದು ಮುಂಬೈ ಬಂದರವಾದನಂತರ ದಲಿದ್ದ ಮೇಲ್ಪಂಕ್ತಿಯನ್ನು ನಮ್ಮ ವ್ಯಾಪಾರಸ್ಥರು ಕಳೆದುಕೊಂಡರು. ಇದ ತ್ತ ಮುಂಬೈ ಬಂದರವು ವ್ಯಾಪಾರದ ಕೇಂದ್ರಸ್ಥಾನವಾಯಿತು. ನಮ್ಮ ಮಾಜದವರು ಸಾಧನದ ಅಭಾವದ ಮೂಲಕವಾಗಿಯೂ, ಧರ್ಮದ ನಿಯಮಗಳ ಷ್ಟವಾದ ಅರ್ಥಗಳ ಸಲುವಾಗಿ ಹೆದರಿಯೂ ಮುಂಬೈ ಬಂದರದಲ್ಲಿ ವಸಾ ತು ಮಾಡುವದನ್ನು ಬಿಟ್ಟರು. ಮುಂಬೈ ಬಂದರದಲ್ಲಿ ಪಾರಶಿ, ಗುಜರಾಥಿ, ಕಚ್ಛೀ ಮುಂತಾದ ಇತರ ಸಮಾಜದವರು ಹೊತ್ತುಸಾಧಿಸಿ ವಸಾಹತ ಮಾಡಿದರು. ವ್ಯಾ ಪಾರದ ಸೂತ್ರಗಳನ್ನು ತಮ್ಮ ಕೈಯಲ್ಲಿಯೇ ತೆಗೆದುಕೊಂಡರು. ಆದರೆ ನಮ್ಮ ರಶೈವ ವ್ಯಾಪಾರಸ್ಥರ ವಿಚಾರಗಳು ಮಾತ್ರ ಅತ್ತಕಡೆಗೆ ಹೋಗಲೇ ಇಲ್ಲ. ಕೇವಲ ಮ್ಮ ಪೂರ್ವಜರು ಶ್ರೀಮಂತರಿದ್ದರೆಂತಲೂ ತಮ್ಮ ಹಣೆಬರಹವು (ದೈವವು) ಲಿದಿರುವದಿಲ್ಲವೆಂತಲೂ, ವ್ಯಾಪಾರದಲ್ಲಿ ಬಹಳ ಜನರು ಸೇರಿದ್ದ ಂದ ತಮ್ಮ ಏಳಿಗೆಯು ಕಡಿಮೆಯಾಯಿತೆಂತಲೂ ಮುಂತಾದ ಷ್ಟ ವಿಚಾರಗಳ ಬಲಿಗೆ ಬಿದ್ದು ತಮ್ಮ ವ್ಯಾಪಾರದ ಸೂತ್ರಗಳನ್ನೇ ಕಳಕೊಂಡರು. ವ್ಯಾಪಾರದಲ್ಲಿ ಮುಂದರಿಯಬೇಕಾದರೆ, ವ್ಯಾಪಾರದ ಸೂತ್ರಗಳು ಸ್ವಲ್ಪ ದರೂ ನಮ್ಮ ಕೈಯಲ್ಲಿ ಸೇರ್ಪಡೆಯಾಗಿ, ನಮ್ಮ ಸಮಾಜದ ಆರ್ಥಿಕ ಸ್ಥಿತಿಯು ಸುಧಾರಿಸಬೇಕಾದರೆ, ಹಿಂದುಸ್ಥಾನದಲ್ಲಿಯ ಮುಖ್ಯ ಬಂದರಗಳಾದ ಮುಂಬೈ, ಕರಾಚಿ, ಕಲಕತ್ತೆ, ಮದ್ರಾಸ, ರಂಗೂನ ತ್ರಿಂಕೋಮಾಲಿ ಮೊದಲಾದ ಳಗಳಲ್ಲಿ ವೀರಶೈವ ವ್ಯಾಪಾರಸ್ಥರು ವಸಾಹತ ಮಾಡಿದರೇನೇ ವ್ಯಾಪಾರದ ನಿಜ ವಾದ ಪದ್ಧತಿ, ಪರದೇಶದ ವ್ಯಾಪಾರದ ಸ್ಥಿತಿಗತಿಯೂ ಗೊತ್ತಾಗುವದು. ವ್ಯಾಪಾರದ ವಿಷಯಕ್ಕೆ ಇರುವ ಸಂಕುಚಿತ ವಿಚಾರಗಳು ಹೋಗಿ, ವಿಸ್ತೃತ ಚಾರಗಳು ಬಂದು, ಆವಶ್ಯವಾದ ಸಾಹಸ ಮತ್ತು ಧೈರ್ಯ ಗುಣಗಳು ದ್ಭವವಾಗಿ ವ್ಯಾಪಾರ ವೃದ್ಧಿಯುಂಟಾಗಿ ಸಮಾಜ ಏಳ್ಗೆಯಾಗುತ್ತ ದೆಂಬ ಸಂದೇಹವಿಲ್ಲ. ಬಂದರಗಳೊಳಗೆ ವಸಾಹತು ಮಾಡು ವದರಲ್ಲಿ ಲಕ್ಷ್ಯಕೊಡದಿದ್ದರೆ ನಮ್ಮ ಸಮಾಜದ ಆರ್ಥಿಕ ಸ್ಥಿತಿಯು ಸುಧಾ

ರಿಸುವದಿಲ್ಲೆಂದು ನಾನು ಖಂಡಿತವಾಗಿ ಹೇಳುತ್ತೇನೆ. ಈ ವಿಷಯದಲ್ಲಿ ಉತ್ತೇಜನದ ದೆಶೆಯಿಂದ ಸಮಾಜದ ಧನ ಸಹಾಯವು ಅವಶ್ಯವಿರುವದರಿಂದ ಸಮಾಜದಲ್ಲಿ ಈ ಬಗ್ಗೆ ಎಚ್ಚರಿಕೆಯನ್ನು ಹುಟ್ಟಿಸಿ ಧನ ಸಂಚಯವನ್ನು ಕೂಡಿಸಿ, ವಸಾಹತುಗಳನ್ನು ಸ್ಥಾಪಿಸುವ ಸಂಬಂಧ ಹೆಜ್ಜೆಯನ್ನು ಮಾಡುವದಕ್ಕೆ ನಾವು ಸಿದ್ಧರಾಗಲಿಕ್ಕೆ ಬೇಕು.

ನೂಲುವ ಮತ್ತು ನೇಯುವ ಗಿರಣಿಗಳ ಅವಶ್ಯಕತೆ.

ಪೃಥ್ವಿಯಲ್ಲಿರುವ ಎಲ್ಲ ದೇಶಗಳೊಳಗೆ ಎಂಟು ರಾಷ್ಟ್ರಗಳು ಮಾತ್ರ ಔದ್ಯೋಗಿಕ ರಾಷ್ಟ್ರಗಳೆನಿಸುತ್ತವೆ. ಅವುಗಳಲ್ಲಿ ಹಿಂದುಸ್ಥಾನವು ಒಂದಾಗಿರುವದು. ಮುಖ್ಯವಾಗಿ, ಮುಂಬೈ ಮತ್ತು ಅಹಮದಾಬಾದದಲ್ಲಿರುವ ನೂಲುವ ಮತ್ತು ನೇಯುವ ಗಿರಣಿಗಳ ಅಸ್ತಿತ್ವದ ಮೂಲಕವಾಗಿ ಹಿಂದುಸ್ಥಾನವು ಔದ್ಯೋಗಿಕ ರಾಷ್ಟ್ರವೆಂದೆನಿಸುತ್ತದೆ. ಇದೊಂದೇ ಮಾತಿನ ಮೇಲಿಂದ ನೂಲುವ ಮತ್ತು ನೇಯುವ ಗಿರಣಿಗಳ ಅವಶ್ಯಕತೆಯು ಮತ್ತು ರಾಷ್ಟ್ರದ ಮೇಲಿನ ಅವುಗಳ ಮಹತ್ವದ ಪರಿಣಾಮವು ಎಷ್ಟಿರುತ್ತದೆಂಬುದು ವ್ಯಕ್ತವಾಗುತ್ತದೆ. ಗಿರಣಿಗಳನ್ನು ಹೆಚ್ಚಿಸಿ ನಡೆಯಿಸುವದರಿಂದ ಒಂದು ದೊಡ್ಡ ಉದ್ಯೋಗದ ಜ್ಞಾನವು ಹರಡುವದಲ್ಲದೆ, ಅವುಗಳಿಂದ ದೊರೆಯುವ ಉತ್ಪನ್ನವು ನಮ್ಮ ಸಮಾಜದಲ್ಲಿ ಉಳಿದು, ನಮ್ಮ ಸಮಾಜದ ಸಾಂಪತ್ತಿಕ ಸ್ಥಿತಿಯನ್ನು ಹೆಚ್ಚು ಮಾಡಲಿಕ್ಕೆ ಕಾರಣವಾಗುವದು ಇಷ್ಟೇ ಅಲ್ಲ. ರಾಜಕೀಯ ದೃಷ್ಟಿಯಿಂದ ನೋಡಿದರೆ, ನಮ್ಮ ದೇಶದ ಆರ್ಥಿಕ ಪ್ರಗತಿಗೆ ನಮ್ಮ ಸಮಾಜವು ಸಹಾಯಮಾಡಿದಂತಾಗುವದು. ಮತ್ತು ಗಿರಣಿಗಳ ಯಜಮಾನರ ಮತ್ತು ಚಾಲಕರ ಕೈಯಲ್ಲಿ ರಾಜಕೀಯ ಶಕ್ತಿಯು ಒಂದು ರೂಪದಿಂದ ಉಂಟಾಗುವದು. ಯಾವ ದೃಷ್ಟಿಯಿಂದ ನೋಡಿದರೂ ಸಹ ಗಿರಣಿಗಳನ್ನು ಸ್ಥಾಪನೆ ಮಾಡುವದು ಅತ್ಯವಶ್ಯವಾದದ್ದೆಂದು ವ್ಯಕ್ತವಾಗುತ್ತದೆ. ಮತ್ತೊಂದು ವಿಚಿತ್ರ ಸಂಗತಿಯೇನಂದರೆ, ಹತ್ತಿ ಬೆಳೆಯುವ ದೇಶಗಳಲ್ಲಿ [illegible] ಸಮಾಜದ ಪ್ರದೇಶದಲ್ಲಿ ನೂಲುವ ನೇಯುವ ಗಿರಣಿಗಳು ಸಾಕಷ್ಟು ಇರದೆ ಇದ್ದದ್ದು, ಕೇವಲ ನಮ್ಮ ಸಮಾಜದ ಅನಾಸ್ಥೆಯು ತೋರಿಸುತ್ತದೆ. ಆದ್ದರಿಂದ ನೂಲುವ ನೇಯುವ ಗಿರಣಿಗಳನ್ನು ಸ್ಥಾಪಿಸಲಿಕ್ಕೆ ಮತ್ತು ನಡೆಯಿಸಲಿಕ್ಕೆ ಸಾಕಷ್ಟು ಸೌಲಭ್ಯವಿರುವದರಿಂದ ಈಗಾದರೂ ಇತ್ತ ಲಕ್ಷ್ಯಕೊಟ್ಟರೆ, ನಮ್ಮ ಸಮಾಜೋನ್ನತಿಗೆ ಹಾಗು ಹಿಂದುಸ್ಥಾನದ ಪ್ರಗತಿಗೆ ಸಹಾಯ ಮಾಡಿದಂತಾಗಿ ನಮ್ಮ ಸಮಾಜವು ಈ ಸಹಾಯ ಮಾಡಿದ ಕೀರ್ತಿಗೆ ಪಾತ್ರವಾಗುವದು.

ಸಂಗತಿ ಸಂಗ್ರಾಹಕ ಸಂಸ್ಥೆಗಳು.

(Information bureau.)

ಅನಾದಿಯಿಂದಲೂ ನಮ್ಮ ಸಮಾಜದಲ್ಲಿ ವ್ಯಾಪಾರವು ನೆಲೆಗೊಂಡದ್ದರಿಂದ ವ್ಯಾಪಾರಕ್ಕೆ ಅವಶ್ಯಕವಾದ ಗುಣಗಳು, ನಮ್ಮವರಲ್ಲಿ, ನೈಸರ್ಗಿಕವಾಗಿಯೇ ಅಂಕುರಿಸಿರುತ್ತವೆ. ಈ ಗುಣಗಳನ್ನು ವಿಕಾಸಗೊಳಿಸುವದು ನಮ್ಮ ಸಮಾಜದ ಅತ್ಯವಶ್ಯವಾದ ಕರ್ತವ್ಯವು. ಇತಿಹಾಸ ದೃಷ್ಟಿಯಿಂದ ನೋಡಿದರೆ, ಕರ್ನಾಟಕದೊಳಗಿನ ಎಲ್ಲ ಪೇಟೆಯ ಸ್ಥಳಗಳು ಮೊದಲು ಮುಖ್ಯವಾಗಿ ವೀರಶೈವ ವ್ಯಾಪಾರೀವರ್ಗದ ನಾಯಕರಾದ ಸೆಟ್ಟರ ಕೈಯಲ್ಲಿದ್ದವೆಂತ ಕಂಡು ಬರುತ್ತದೆ. ಬರಬರುತ್ತ ಈ ವ್ಯಾಪಾರ ಸೂತ್ರವು, ಎರಡನೇ ಸಮಾಜದವರ ಕೈಯಲ್ಲಿ ಸೇರಿದ್ದರಿಂದಲೂ, ನಮ್ಮ ವ್ಯಾಪಾರೀ ನಾಯಕರ (ಸೆಟ್ಟರ) ವಿಚಾರಗಳೂ, ಅವುಗಳನ್ನವಲಂಬಿಸಿದ ಕೃತಿಗಳೂ, ಪರಿಸ್ಥಿತಿಗೆ ಅನುಸರಿಸಿ ಕಾಲಕಾಲಕ್ಕೆ ಬದಲಾಯಿಸದೆ ಇದ್ದುದರಿಂದ ಪೇಟೆಗಳ ಸೆಟ್ಟರ-ಪೇಟೆಯ-ಮೇಲಿನ-ಅಧಿಕಾರವೂ ಹೋಗಿ ಬಿಟ್ಟಿತು. ವ್ಯಾಪಾರದ ಹೊಸಪದ್ಧತಿಯನ್ನು ತಿಳಿದು ಕೊಳ್ಳಲಿಕ್ಕೆ ಪ್ರಯತ್ನ ಮಾಡದೆ ಹಳೇ ಕಲ್ಪನೆಗಳಂತೆಯೇ ನಡೆಯ ಹತ್ತಿದರು ಕೇವಲ ಅಭಿಮಾನ ಅಥವಾ ಮರ್ಯಾದೆಯ ಕಡೆಗೆಯೇ ಹೆಚ್ಚು ಲಕ್ಷ್ಯಕೊಡಹತ್ತಿದರು. ಆದರೆ, ಈ ಅಭಿಮಾನವು, ಮರ್ಯಾದೆಯು, ಅಥವಾ ಶ್ರೇಷ್ಠತ್ವದ ಮೂಲಾಧಾರವಾದ ವ್ಯಾಪಾರದ ಸೂತ್ರಗಳೇ ತಮ್ಮ ಕೈಬಿಟ್ಟು ಹೋಗುತ್ತಿರುವದನ್ನು ಕಣ್ಣೆತ್ತಿ ನೋಡಲಿಲ್ಲ. ಅದ್ದರಿಂದಲೇ ಈ ನಮ್ಮ ಸಮಾಜದ ದುಃಸ್ಥಿತಿಯು ಉಂಟಾಗಿದೆ. ಬಂದರಗಳಲ್ಲಿ ವ್ಯಾಪಾರ ಮಾಡುವಲ್ಲಿಯೂ ಗಿರಣಿಗಳನ್ನು ಸ್ಥಾಪಿಸಿ ನಡೆಯಿಸಿಕೊಳ್ಳುವಲ್ಲಿಯೂ, ಹಿಂದುಸ್ಥಾನದ ಎಲ್ಲ ಭಾಗಗಳ ವ್ಯಾಪಾರದ ಸ್ಥಿತಿಯನ್ನು ತಿಳಿದುಕೊಳ್ಳುವಲ್ಲಿಯೂ, ನಾವೆಲ್ಲರೂ ಮನಸ್ಸು ಹಾಕಬೇಕು. ಈ ಬಗ್ಗೆ ವ್ಯವಹಾರಸ್ಥರೆಲ್ಲರೂ ಕೂಡಿ ವ್ಯಾಪಾರದ ಮುಖ್ಯ ಮುಖ್ಯ ಸ್ಥಳಗಳಲ್ಲಿ ವ್ಯಾವಹಾರಿಕ ಜ್ಞಾನವು ಸುಲಭವಾಗಿ ಪೂರೈಸುವಂಥ ಸಂಗತಿ ಸಂಗ್ರಾಹಕ ಸಂಸ್ಥೆಗಳನ್ನು ಸ್ಥಾಪಿಸಿಕೊಂಡು, ಅವುಗಳಿಗೆ ತಗಲುವ ಧನ ಸಹಾಯವನ್ನು ಅಲ್ಲಲ್ಲಿಯ ವ್ಯಾಪಾರಸ್ಥರೇ ಮಾಡಿಕೊಳ್ಳಬೇಕು. ಈಗಿನ ದಿವಸಗಳಲ್ಲಿ ವ್ಯಕ್ತಿಶಃ ಸಾಹಸ ಮಾಡುವದಕ್ಕಿಂತಲೂ ಸಂಘ ಶಕ್ತಿಯ ಮತ್ತು ಪರಸ್ಪರ ಸಹಕಾರಿತೆಯ ಬಲದಿಂದ ಕಾರ್ಯ ಸಾಧಿಸಿಕೊಳ್ಳುವದು ಹೆಚ್ಚು ಶ್ರೇಯಸ್ಕರವು. ಆದುದರಿಂದ

ಎಲ್ಲಾ ವ್ಯಾಪಾರಸ್ಥರು ಈ ಪ್ರಕಾರದ ಸಂಘಟಿತ-ಸಂಗ್ರಾಹಕ-ಸಂಸ್ಥೆಗಳನ್ನು ಮುಖ್ಯ ಮುಖ್ಯ ಪೇಟೆಗಳಲ್ಲಿ ಸ್ಥಾಪಿಸಬೇಕಾದ್ದು. ಹಾಗೆಯೇ ನಮ್ಮ ದೇಶದ ಮಹತ್ವದ ಭಾಗಗಳಲ್ಲಿ, ನಮ್ಮ ಸಮಾಜದ ವ್ಯಾಪಾರಸ್ಥರು ಸಂಚರಿಸುವಂತೆಯೂ, ಪರದೇಶಗಳಲ್ಲಿಯೂ ಸಂಚರಿಸಿ, ವ್ಯಾಪಾರದ ಸ್ಥಿತಿಗಳನ್ನು ತಿಳಿದುಕೊಳ್ಳುವಂತೆಯೂ, ವ್ಯವಸ್ಥೆ ಮಾಡುವದು ಅತ್ಯವಶ್ಯಕವಾದದ್ದು, ಈ ವಿಷಯಕ್ಕಾದರೂ ಧನ ಸಹಾಯವನ್ನು ಸಮಾಜದವರೆಲ್ಲರೂ ಸಂಘಶಕ್ತಿಯಿಂದ ಮಾಡಿಕೊಳ್ಳುವದು ಸಾಧ್ಯವೆಂದು ನನಗೆ ತೋರುತ್ತದೆ.

ಸಂಶೋಧನ ಶಾಲೆಗಳು.

ದೇಶದ ದೃಷ್ಟಿಯಿಂದಲೂ, ಉದ್ಯೋಗದ ದೃಷ್ಟಿಯಿಂದಲೂ ಉದ್ಯೋಗಗಳ ಸಂಪೂರ್ಣ ಲಾಭಗಳು ನಮಗೆ ಆಗಬೇಕಾದರೆ, ನಾವು ಮೊದಲು ಸಂಶೋಧನ ಶಾಲೆಗಳನ್ನು ಸ್ಥಾಪಿಸಬೇಕು. ಈ ಸಂಶೋಧನ ಶಾಲೆಗಳಲ್ಲಿ, ಎಲ್ಲಾ ಬಗೆಯ ಶಾಸ್ತ್ರಜ್ಞರೂ, ಅನುಭವಶೀಲರೂ, ಪ್ರಯೋಗಗಳನ್ನು ಮಾಡಿ ಉದ್ಯೋಗಗಳು ಸುಧಾರಿಸುವಂತೆ ಪ್ರಯತ್ನ ಮಾಡುವದು ಅವಶ್ಯವಿರುತ್ತದೆ. ಇದಕ್ಕೆ ಬೇಕಾದ ಧನ ಸಹಾಯವನ್ನು ಸಮಾಜವೇ ಮಾಡತಕ್ಕದ್ದು. ಮುಖ್ಯವಾಗಿ ವ್ಯಾಪಾರಸ್ಥರು ತಮ್ಮ ಧರ್ಮಾದಾಯದ ಹಣದಲ್ಲಿಯ ಅಥವಾ ತಮ್ಮ ಲಾಭದಲ್ಲಿಯ ಕೆಲವು ಭಾಗವನ್ನಾದರೂ, ಈ ಸಂಶೋಧನ ಶಾಲೆಗಳಿಗಾಗಿ, ಒಂದೊಂದು ಧಾರ್ಮಿಕ ಕೃತ್ಯವೆಂದು ತಿಳಿದು, ವೆಚ್ಚ ಮಾಡಬೇಕು.

ನಮ್ಮ ದಾನ ಪದ್ಧತಿಯು.

ದಾನವು ಶ್ರೇಷ್ಠವಾದದ್ದೆಂದು ಹಿಂದೂ ಸಮಾಜದ ದೃಢವಾದ ತಿಳುವಳಿಕೆ ಇರುತ್ತದೆ. ಈ ತಿಳುವಳಿಕೆಯು ಶ್ರೇಯಸ್ಕರವಾದದ್ದು. ರೇಲ್ವೆಯಾಗಿ ಉಗಿಸಂತೆ ಪರದೇಶಕ್ಕೆ ಧಾನ್ಯಗಳು ಹೋಗುವದಕ್ಕೂ ಮೊದಲು, ದಾನವು ವಿಶೇಷವಾಗಿ ಧಾನ್ಯ ರೂಪದಿಂದ ಕೊಡಲ್ಪಡುತ್ತಿತ್ತು. ಆ ಕಾಲಕ್ಕೆ ಧಾನ್ಯಕ್ಕೆ ಹೆಚ್ಚು ಬೆಲೆ ಇದ್ದಿಲ್ಲ. ಸಮಾಜ ಗುರುಗಳು ಧಾನ್ಯಗಳನ್ನು ದಾನರೂಪವಾಗಿ ತೆಗೆದುಕೊಂಡು, ತಮಗೆ ಸಾಕಾಗಿ ಹೆಚ್ಚುಳಿದ ಧಾನ್ಯವನ್ನು, ಅನ್ನಛತ್ರಗಳಿಗಾಗಿ ಉಪಯೋಗಿಸಿಕೊಳ್ಳುತ್ತಿದ್ದರು. ಆದ್ದರಿಂದಲೇ, ನಮ್ಮ ಸಮಾಜದಲ್ಲಿ, ವಿಶೇಷವಾಗಿ ಅನ್ನಛತ್ರಗಳೂ, ಅನ್ನದಾನ ಗೃಹಗಳೂ ಅಲ್ಲಲ್ಲಿ ಕಂಗೊಳಿಸುತ್ತವೆ. ಅನ್ನದಾನವು ಶ್ರೇಯಸ್ಕರವಾದ

ಪ್ರಾಂತದಕ್ಕೆ ಭಿನ್ನಾಭಿಪ್ರಾಯಗಳಿರುವವು. ಇತ್ತೀಚಿಗಾಗಿ ಪರದೇಶಗಳಿಗೂ, ಈ ದೇಶದ ಎಂತಹ ಭಾಗಗಳಿಗೂ ಧಾನ್ಯಗಳು ನಿರ್ಗಮನವಾಗುತ್ತಿದ್ದರಿಂದ ಧಾನ್ಯಗಳಿಗೆ ಬೆಲೆ ಏರಿ, ಜನರಿಗೆ ಮೊದಲಿನಂತೆ ಧಾನ್ಯವನ್ನು ಹೇರಳವಾಗಿ ದಾನಮಾಡಲಿಕ್ಕೆ ಕಠಿಣವಾಗುತ್ತದೆ. ಬರ ಬರುತ್ತ ಅನ್ನಛತ್ರಗಳು ಕಡಿಮೆಯಾಗುತ್ತಿವೆ. ಮೊದಲು ಎಲ್ಲಿಯಾದರೂ ಪುರಾಣ ಕಥನವನ್ನು ಹಚ್ಚಿ, ಒಂದು ಕಾಂಡವು ಮುಗಿದ ಕೂಡಲೇ, ಸಾರ್ವಜನಿಕ ಪ್ರಸ್ತಗಳು ಆಗುತ್ತಿದ್ದವು. ಜನರಲ್ಲಿ ಧಾನ್ಯ ಸಂಗ್ರಹವು ವಿಪುಲವಾಗಿದ್ದ ಮೂಲಕ, ಪುರಾಣ ಕಥನದ ನಿಮಿತ್ತವಾಗಿ, ದೊಡ್ಡ ದೊಡ್ಡ ಪ್ರಸ್ತಗಳನ್ನು ಮಾಡಲಿಕ್ಕೆ ತೊಂದರೆಯಾಗುತ್ತಿರಲಿಲ್ಲ. ಅದೇ ಪ್ರಕಾರವಾಗಿ, ಈಗಿನ ತುಟ್ಟಾಗ್ರತೆಯ ಕಾಲದಲ್ಲಿ ಮಾಡಹೋದರೆ, ಸಾಧ್ಯವಿಲ್ಲ. ಪುರಾಣ ಶ್ರವಣ ಪ್ರೀತ್ಯರ್ಥವಾಗಿ ಪ್ರತಿಯೊಂದು ಕಾಂಡದ ಸಮಾಪ್ತಿಗೂ, ಅನ್ನ ಸಂತರ್ಪಣದ ಆವಶ್ಯಕತೆಯುಂಟೆಂದು ದಾನಾತಿರೇಕವನ್ನು ಮಾಡಿ, ಹಳೇ ಕಲ್ಪನೆಗಳ ದಾಸ್ಯಾನು ದಾಸರಾಗಿ ನಡೆಕೊಂಡದ್ದರಿಂದುಂಟಾಗುವ, ದುಷ್ಟ ಪರಿಣಾಮಗಳಿಗೆ ಬಲಿಗಳಾಗಿ ಪೇಚಾಡುವದು ಯುಕ್ತವಲ್ಲ. ಪರಿಸ್ಥಿತಿಗನುಸಾರವಾಗಿ ನಮ್ಮ ಕಲ್ಪನೆಗಳನ್ನೂ, ವಿಚಾರಗಳನ್ನೂ, ಬದಲಿಸಲಿಕ್ಕೆ ನಾವು ಕಲಿತುಕೊಳ್ಳಬೇಕು. ಮುಖ್ಯವಾಗಿ, ನಾವು ಇಂದಿನ ಪರಿಸ್ಥಿತಿಯಲ್ಲಿ, ನಮ್ಮ ದಾನಪದ್ಧತಿಯು ಅಥವಾ ಕ್ರಮದ ಕಲ್ಪನೆಗಳನ್ನು ಬದಲಿಸಬೇಕು. ವ್ಯಾಪಾರಸ್ಥರೂ, ಒಕ್ಕಲಿಗರೂ, ಸಮಾಜದ ಆರ್ಥಿಕ ಆವಶ್ಯಕತೆಗಳನ್ನು ಅನುಲಕ್ಷಿಸಿ, ಅವುಗಳನ್ನು ಪೂರೈಸಿಕೊಳ್ಳಲಿಕ್ಕೆ, ಬೇಕಾಗಿದ್ದ ಧನ ಸಹಾಯವನ್ನು, ದಾನರೂಪದಿಂದ ಮಾಡಬೇಕು. ವ್ಯಾಪಾರಸ್ಥರು ತಮ್ಮಲ್ಲಿ ಸಂಚಯವಾಗುವ ಧರ್ಮಾದಾಯದ ಹಣವನ್ನು, ಅಥವಾ ಆದಾಯದ ಎಪ್ಪತ್ತರ ಭಾಗವನ್ನು ಹಾಗು ಒಕ್ಕಲಿಗರು ಒಕ್ಕಲುತನ ಧಾನ್ಯರಾಶಿಗಳ ಹತ್ತಿರ ದಾನವೆಂದು ಕೊಡುವ ಧಾನ್ಯವನ್ನು, ಸಂಶೋಧನ ಶಾಲೆಗಳಿಗೆ, ಸಂಗೀತ-ಸಂಗ್ರಹಕ ಸಂಸ್ಥೆಗಳಿಗೆ, ವಿದ್ಯಾರ್ಥಿ ನಿಲಯಗಳಿಗೆ, ಪ್ರಯೋಗ ಶಾಲೆಗಳಿಗೆ ಸಹಾಯಾರ್ಥವಾಗಿ ಕೊಟ್ಟರೆ, ಸತ್ಪಾತ್ರದಲ್ಲಿ ದಾನ ಮಾಡಿದಂತಾಗುತ್ತದೆ. ಒಂದು ವೇಳೆ ಈ ಕಲ್ಪನೆಯು, ಇದುವರೆಗೂ ರೂಢಿಯಲ್ಲಿದ್ದ ನಮ್ಮ ದಾನ ಪದ್ಧತಿಗೆ, ವಿರುದ್ಧವೆಂದು ಕೆಲವರು ಅಭಿಪ್ರಾಯಪಟ್ಟರೂ, ಈ ವಿಷಯವನ್ನು ಸಮಾಧಾನದಿಂದ, ಸಂಪೂರ್ಣವಾಗಿ, ವಿಚಾರಕ್ಕೆ ತಂದುಕೊಂಡರೆ, ನಾನು ಹೇಳುವ ಅರ್ಥವು ತಿಳಿಯುವ ಮಾರ್ಗವಷ್ಟೆ, ಹೆಚ್ಚು ಶ್ರೇಯಸ್ಕರ

ಮಾಡಬೇಕೆಂತಲೂ, ಸಮಾಜದ ಐಹಿಕ ಸುಖವನ್ನು ಹೆಚ್ಚಿಸಿ, ಆತ್ಮೋನ್ನತಿಗೂ ಸಾಧ
ವಾಗುವದೆಂತಲೂ ಅವರಿಗೆಯೇ ಕಂಡು ಬರುವದು.

ಯಾವಾಗಲೂ ನಾವು ದೂರದೃಷ್ಟಿಯಿಂದ ನಡೆಯಲಿಕ್ಕೆ ಪ್ರಯತ್ನ ಮಾ
ಬೇಕು. ಸದ್ಯಕ್ಕೆ ಸಮಾಧಾನವನ್ನುಂಟು ಮಾಡುವ ಕೃತಿಗಳಿಗಿಂತಲೂ, ಹೆಚ್ಚು ಶಾಶ್ವತ
ವಾದ ಹಿತವನ್ನುಂಟು ಮಾಡುವ ಕೃತಿಗಳಿಗೆಯೇ, ನಾವು ಹೆಚ್ಚು ಮಹತ್ವವನ್ನು ಕೊ
ಬೇಕೆಂಬುವ ವಿಚಾರಗಳು ನಮ್ಮಲ್ಲಿ ಅಂಕುರಿಸಬೇಕು.

ಕೃಷಿಕರ್ಮ ಸುಧಾರಣೆಯು.

ಹಿಂದುಸ್ಥಾನದಲ್ಲಿ ಒಕ್ಕಲತನವು ಮುಖ್ಯವಾದ ಉದ್ಯೋಗವಿದ್ದು, ಈ
ಉದ್ಯೋಗದ ಮೇಲೆ ಜನರು ನೂರಕ್ಕೆ ಎಂಭತ್ತರಂತೆ ಅವಲಂಬಿಸಿರುವದರಿಂದ
ಒಕ್ಕಲತನವನ್ನು ಹೆಚ್ಚಿಗೆ ಸುಧಾರಿಸಲಿಕ್ಕೆ ಪ್ರಯತ್ನ ಮಾಡಬೇಕು. ಕೃಷಿ ಸುಧ
ರಣೆಯ ಕುರಿತು, ಸರಕಾರದವರು ಹೆಚ್ಚು ಪ್ರಯತ್ನ ಪಡಹತ್ತಿದ್ದಾರೆ. ಹಿಂದುಸ್ಥಾ
ನದ ಒಕ್ಕಲತನದಲ್ಲಿ, ಸುಧಾರಣೆಗಳನ್ನುಂಟು ಮಾಡುವ ಕುರಿತು ಒಂದು ಕಮೀಶನ್ನ
ವನ್ನು ಸರಕಾರದವರು ನಿಯಮಿಸಿದ್ದು, ಅದರ ವಿಚಾರಣೆಯು ಇನ್ನೂ ನಡೆದಿರುತ್ತದೆ.
ಒಕ್ಕಲತನದಂಥ ಪವಿತ್ರ ಉದ್ಯೋಗವನ್ನು, ನಮ್ಮ ಸುಶಿಕ್ಷಿತರು ಕೈಕೊಂಡು, ಒಕ್ಕ
ಲತನಕ್ಕೆ ಹೆಚ್ಚು ಗೌರವವನ್ನು ಕೊಟ್ಟು ಅದನ್ನು ಸುಧಾರಿಸುವ ಹೊಸಮಾದರಿಯ
ಪ್ರಯೋಗಗಳನ್ನು ತೋರಿಸಿ, ಭೂಮಿಯಿಂದ ಹೆಚ್ಚು ಬೆಳೆಯನ್ನು ತೆಗೆದುಕೊಳ್ಳುವ
ಕ್ರಮವನ್ನು, ರೈತರ ಮನಸ್ಸಿನಲ್ಲಿ ಬಿಂಬಿಸಿ ಕೊಡಬೇಕು. ಒಕ್ಕಲಿಗರ ಸಂಘಗಳಲ್ಲಿ, ಸು
ಶಿಕ್ಷಿತರು ಹೆಚ್ಚು ಸೇರ್ಪಡೆಯಾಗಿ, ಒಕ್ಕಲಿಗರ ಆರ್ಥಿಕ ಸ್ಥಿತಿಯನ್ನು ಸುಧಾರಿಸು
ಉಪಾಯಗಳನ್ನು ಸೂಚಿಸಬೇಕು.

ನಮ್ಮ ಸಮಾಜದ ತರುಣರು, ಹಿಂದಿನಕಿಂತಲೂ, ಈಗಿನಕಿಂತಲೂ, ಹೆಚ್ಚಾ
ಒಕ್ಕಲತನದ ಕಾಲೇಜುಗಳಲ್ಲಿ ಸೇರತಕ್ಕದ್ದು. ಹಾಗೆಯೇ, ಅವರು ಹೆಚ್ಚು
ಸಂಖ್ಯಾಕರಾಗಿ ಇವುಗಳಲ್ಲಿ ಸೇರಿಕೊಳ್ಳಲಿಕ್ಕೆ, ನಮ್ಮ ಸಮಾಜವು ಉತ್ತೇಜನ ಕೊ
ಬೇಕು. ಒಕ್ಕಲತನದ ಕಾಲೇಜದಲ್ಲಿ, ತೇರ್ಗಡೆ ಹೊಂದಿದ ತರುಣರು ಸರಕಾರಿ
ನೌಕರಿಯ ಮೇಲೆಯೇ ಕಣ್ಣಿಟ್ಟಿರಕೂಡದೆ, ಒಕ್ಕಲತನದ ಉದ್ಯೋಗದಲ್ಲಿಯೇ ನಿರ
ರಾಗಿರುವದು ಅವಶ್ಯಕವು. ಇಷ್ಟರೂ ಒಕ್ಕಲತನದ ಕಾಲೇಜದಲ್ಲಿ ತೇರ್ಗ
ಹೊಂದಿದ ತರುಣರು [illegible]

ಒಕ್ಕಲಿಗರನ್ನು ನೇಮಿಸಿದರೆ, ಅವರು ಒಕ್ಕಲತನದ ಶಾಲೆಯಲ್ಲಿ ಅಭ್ಯಾಸ ಮಾಡಿದ್ದರ ಫಲವು ಸ್ವಲ್ಪದಲ್ಲಿ ತೀವ್ರವಾಗಿ ಕಾಣುವದು. ಅಥವಾ ಆ ಕೃಷಿಕರ್ಮ ವಿದ್ಯೆಯನ್ನು ಸಂಪಾದಿಸಿದ ನಮ್ಮ ಸಹೋದರರು ತಾವು ಕಲಿತ ಹೊಸ ಕಲ್ಪನೆಗಳನ್ನೂ ಶೋಧನೆಗಳನ್ನೂ ಜನರಲ್ಲಿ ಪ್ರಯೋಗಿಸಿ ಪ್ರಸಾರ ಮಾಡಬಹುದು. ಈಗ ಸ್ವತಂತ್ರದಲ್ಲಿದ್ದ ಒಕ್ಕಲತನದ ಶಾಲೆಗಳು ಕಡಿಮೆ ಇದ್ದು, ಅವುಗಳ ಸಂಖ್ಯೆಯನ್ನು ಹೆಚ್ಚಿಸುವದು ಸರಕಾರದ ಕರ್ತವ್ಯವಿದೆ. ದಕ್ಷಿಣ ಕರ್ನಾಟಕದಲ್ಲಿ ಒಕ್ಕಲತನದ ಶಾಲೆಯೊಂದನ್ನು ಸರಕಾರದವರು ತೀವ್ರವಾಗಿ ಸ್ಥಾಪಿಸತಕ್ಕದ್ದೆಂದು ಸರಕಾರಕ್ಕೆ ನನ್ನ ಆಗ್ರಹದ ಸೂಚನೆಯುಂಟು.

ಒಂದು ಉಪಯುಕ್ತವಾದ ಸೂಚನೆಯು.

ನಮ್ಮ ಸಮಾಜದಲ್ಲಿಯ ಬಹು ಸಂಖ್ಯಾತರು ಭೂಮಿಯ ಮೇಲೆ ಬಹಳ ಪ್ರೀತಿಯುಳ್ಳವರೂ, ಬಹುಜನರು ಕೃಷಿಕರ್ಮದಿಂದ ಜೀವಿಸುವವರೂ ಇರುತ್ತಾರೆ. ಈ ಕಾರಣದಿಂದಲೇ ಭೂಮಿಗಳನ್ನು ಸಂಪಾದಿಸುವ ಹಂಬಲವು ನಮ್ಮ ಜನರಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಈ ಪ್ರಕಾರದ ಇಚ್ಛೆಯು ಯಾವದು ಗೌರವವುಳ್ಳ ಸಂಗತಿಯಾದರೂ ಲಾಭದಾಯಕ ಭೂಮಿಯು ಹೆಚ್ಚಿಗೆ ಸಿಗದ್ದರಿಂದಾಗಿ ಜನರಲ್ಲಿ ಒಂದು ತರದ ಅಸಮಾಧಾನವುಂಟಾಗಿರುತ್ತದೆ. ಇದರಿಂದ ಭೂಮಿಗಳ ಬೆಲೆಯು ಸ್ವಾಭಾವಿಕವಾಗಿ ಇರಬೇಕಾದ್ದಕ್ಕಿಂತಲೂ ಹೆಚ್ಚು ಇರುವದೆಂದು ತಿಳಿಯುತ್ತದೆ. ಈ ಪರಿಸ್ಥಿತಿಯೊಳಗಿಂದ ಪಾರಾಗಲಿಕ್ಕೆ, ನಾನೊಂದು ಉಪಾಯವನ್ನು ಸೂಚಿಸುತ್ತೇನೆ. ನಮ್ಮ ಮುಂಬಯಿ ಇಲಾಖೆಯಲ್ಲಿ, ಇಷ್ಟೊಂದೆಡೆಗೆ ಉತ್ತಮವಾದ ಹವೆಯುಳ್ಳ ಪ್ರದೇಶದಲ್ಲಿ ಫಲದ್ರೂಪವಾದ ಭೂಮಿಯು ಸಾಗುವಳಿಮಾಡಲಿಕ್ಕೆ ಬೇಕಾದಷ್ಟು ಸಿಗುವಂತಿದೆ. ಅಲ್ಲಿ ಜನವಸತಿಯು ಪ್ರಮಾಣವು ಕಡಿಮೆ ಇದ್ದು, ಭೂಮಿಯನ್ನು ಸಾಗುಮಾಡುವವರ ಅಂದರೆ, ಕೈತರಕೊರತೆಯು ಬಹಳವಾಗಿರುತ್ತದೆ. ಅಲ್ಪಶ್ರಮದಿಂದ ಉತ್ಕೃಷ್ಟವಾದ ಬೆಳೆಯನ್ನು ಯಥೇಚ್ಛವಾಗಿ ಬೆಳೆಯುವ ಭೂಮಿಗಳು, ಸಿಂಧ ಪ್ರಾಂತದಲ್ಲಿ ವಿಶೇಷವಾಗಿ ದೊರೆಯುವಂತಿವೆ. ಸಿಂಧು ನದಿಗೆ ಸಕ್ಕರ ಪಟ್ಟಣದ ಹತ್ತರ ಮುಂಬಯಿ ಸರಕಾರದವರು ಒಂದು ಬಾಂಧನ್ನು (ಅಣೆಕಟ್ಟು) ಕಟ್ಟಿ, ಅನೇಕ ಕಾಲುವೆಗಳನ್ನು ತೆಗೆದಾರಿ, ಲಕ್ಷಗಟ್ಟಲೆ ಎಕರೆ ಭೂಮಿಯು ನೀರುಣ್ಣುವಂತೆ ಮಾಡುತ್ತಿರುವದರಿಂದ ಭೂಮಿಯನ್ನು ಸಂಪಾದಿಸಬೇಕೆಂಬ ಇಚ್ಛೆಯುಳ್ಳವರಿಗೂ, ಕೃಷಿಕರ್ಮದಲ್ಲಿ ಪ್ರೀತಿಯುಳ್ಳವರಿಗೂ, ಸಿಂಧು ಪ್ರಾಂತದಲ್ಲಿ ಸಾಕಷ್ಟು ಭೂಮಿಯು ದೊರೆಯುವಂತಿದೆ. ಅಲ್ಲಿಯ ಹವೆಯು ಸಮಶೀತೋಷ್ಣವಾಗಿಲ್ಲದಿದ್ದರೂ ಆರೋಗ್ಯಕರವಾಗಿರುತ್ತದೆ. ಅಲ್ಲಿಯ ಜನರು ಅತಿಥಿಸತ್ಕಾರದಲ್ಲಿ ಹೆಸರಾದವರು, ಇದರಿಂದ ನಮ್ಮ ಸಮಾಜದಲ್ಲಿದ್ದ ಸಹೋದ್ಯೋಗಿಗಳಿಗೆ ಅಲ್ಲಿ ಭೂಮಿಯನ್ನು

ವಿಚಾರ ಕ್ರಾಂತಿಯ ಮೂಲಕ ಸಹಕಾರಿತೆಗೆ ನವೀನ ಹಾಗು ಸುಸಂಘಟಿತವಾದ ಸ್ವರೂಪವು ಪ್ರಾಪ್ತವಾಗಿದ್ದರಿಂದ ನಮ್ಮ ಹಿಂದುಸ್ಥಾನದಲ್ಲಿಯೂ ಸರಕಾರದವರ ಪುರಸ್ಕಾರದಿಂದ ಸಹಕಾರಿ ಸಂಘಗಳು ನಿರ್ಮಾಣವಾಗಿ, ಪ್ರಜಾಜನರ ಸಾಂಪತ್ತಿಕ ಸ್ಥಿತಿಯನ್ನು ಆಮೂಲಾಗ್ರವಾಗಿ ಸುಧಾರಿಸುವ ಪ್ರಯತ್ನವೇ ಮಾಡಿಸುವ ಸಂಸ್ಥೆಗಳಾದ್ದರಿಂದ, ಸಹಕಾರದ ಸವತೇಜದಲ್ಲಿ ಅಗತ್ಯವಾದ ಮೂಲ ತತ್ವಗಳನ್ನು ತಿಳಿದುಕೊಂಡು, ಅವುಗಳನ್ನು ಆಚರಣದಲ್ಲಿ ತಂದುಕೊಂಡು ಪರಸ್ಪರ ಸಹಕಾರಿ ಸಂಘಗಳ ಕಾರ್ಯಾಂಕರದಲ್ಲಿ ನಮ್ಮ ಸಮಾಜವು ಹೆಚ್ಚು ಮನಸ್ಸನ್ನು ಹಾಕಿದರೆ, ಮುಖ್ಯವಾಗಿ ನಮ್ಮ ರೈತರ ಸ್ಥಿತಿಯು ಜಾಗ್ರತೆಯಾಗಿ ಸುಧಾರಿಸುವದೆಂದು, ನನ್ನ ದೃಢವಾದ ನಂಬಿಗೆಯುಂಟು. ವ್ಯಾಪಾರ ವರ್ಧನಕ್ಕೂ, ಪ್ರಸಾರಕ್ಕೂ ಬ್ಯಾಂಕುಗಳ ಆವಶ್ಯಕತೆಯು ಮಹತ್ವವು ನಮ್ಮ ವ್ಯಾಪಾರಸ್ಥರೆಲ್ಲರಿಗೂ ಈಗಾಗಲೇ ಮನದಟ್ಟಾಗಿರುವದೆಂದು ಗೃಹೀತವಾಗಿಟ್ಟುಕೊಂಡು, ಆ ಬಗ್ಗೆ ವಿಸ್ತಾರವಾಗಿ ಹೇಳುವದು ಅಗತ್ಯವಿಲ್ಲೆಂದು ನನ್ನ ತಿಳುವಳಿಕೆಯಿದೆ. ನಮ್ಮ ಸಮಾಜದಲ್ಲಿಯ ವಿದ್ಯಾವಂತರಾದ ತರುಣರಿಗೆ ಬ್ಯಾಂಕುಗಳನ್ನು ನಡೆಸುವ ಕೌಶಲ್ಯವನ್ನು ಸಂಪಾದಿಸುವದಕ್ಕೆಂದು ನಮ್ಮ ಸಮಾಜದ ವ್ಯಾಪಾರಸ್ಥರು ಉತ್ತೇಜನ ಕೊಟ್ಟು ಆದಂತೆ ಪ್ರಯತ್ನಮಾಡಿ ಅಲ್ಲಲ್ಲಿ ಬ್ಯಾಂಕುಗಳನ್ನು ಧಾರಾಳವಾಗಿ ಸ್ಥಾಪಿಸಬೇಕು.

ನೇಕಾರಿಕೆ ಮತ್ತು ಸ್ವದೇಶೀ ವಸ್ತ್ರ ಪ್ರಸಾರ.

ಸ್ವದೇಶೀಯ ವಸ್ತ್ರ ಪ್ರಾವರಣಗಳನ್ನು ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಬಳಸುವದು ದೇಶದ ಹಿತದ, ಸಮಾಜದ ಬೆಳವಣಿಗೆಯ, ಮುಖ್ಯಕಾರಣವಾಗುವದು. ಈ ದಿಸೆಯಲ್ಲಿ ಮಾಡಿದಷ್ಟು ಪ್ರಯತ್ನಗಳೆಲ್ಲ ಕಡಿಮೆಯೆಂತಲೇ ಹೇಳಬಹುದು. ನಮ್ಮ ದೇಶದಲ್ಲಿ ನಾವು ಉಪಯೋಗಿಸುವ ಉಡುತೊಡುವ ವಸ್ತ್ರಗಳನ್ನು ನಾವು ಅಭಿಮಾನ ಪೂರ್ವಕವಾಗಿ ತಯಾರ ಮಾಡಬೇಕಲ್ಲದೆ, ಅವುಗಳನ್ನೇ ಉಪಯೋಗಿಸಬೇಕು. ಈ ಬಗ್ಗೆ ತುಸು ಅನಾನುಕೂಲತೆಯಾದರೂ ಸಹ ಅದೆಲ್ಲವನ್ನೂ ನಾವು ಸಹಿಸಬೇಕು. ಕೇವಲ ವಸ್ತ್ರದ ಸೌಂದರ್ಯಕ್ಕೆ ಮೋಹಿಸದೆ, ಒರಟಾಗಿದ್ದರೂ ನಮ್ಮ ದೇಶೀಯ ವಸ್ತ್ರಗಳನ್ನೇ ನಾವು ದೇಶದ ಅಭಿಮಾನದಿಂದ ಹೆಚ್ಚಾಗಿ ಉಪಯೋಗ ಮಾಡಹತ್ತಿದರೆ, ನೂಲುವ ಮತ್ತು ನೇಯುವ ಉದ್ಯೋಗಗಳಿಗೆ ಉತ್ತೇಜನವು ಹೆಚ್ಚಾಗಿ, ಅನೇಕರಿಗೆ ಈ ಉದ್ಯೋಗದಿಂದ ಅಪರಿಮಿತ ಲಾಭವನ್ನು ಉಂಟುಮಾಡಿ ಕೊಟ್ಟಂತಾಗುವದಲ್ಲದೆ, ದೇಶದ ಸಾಂಪತ್ತಿಕ ಸ್ಥಿತಿಯನ್ನು ಪುಷ್ಟೀಕರಿಸಿದಂತಾಗುವದು.

ಈ ಬಗ್ಗೆ ಪಂಜಾಬ ಇಲಾಖೆಯು ಒಂದೇ ಒಂದು ಉದಾಹರಣೆಯು ಸಾಕಾಗಬಹುದು. ಪಂಜಾಬದೊಳಗೆ ಸರಕಾರದವರು ಕಾಲುವೆಗಳನ್ನು ಬಿಡುವ ಪೂರ್ವದಲ್ಲಿ, ಜನಸಂಖ್ಯೆಯು ಕಡಿಮೆ ಇತ್ತು; ಜನರ ಸಾಂಪತ್ತಿಕ ಸ್ಥಿತಿಯು ಹೀನವಾಗಿತ್ತು. ಕಾಲುವೆಗಳಾದ ತರುವಾಯ ಸ್ವಲ್ಪ ಕಾಲದಲ್ಲಿಯೇ, ಜನರ ಸಾಂಪತ್ತಿಕ ಸ್ಥಿತಿಯಲ್ಲಿ ಅಪೂರ್ವವಾದ ಸುಧಾರಣೆಯಾಗಿರುತ್ತದೆ. ಇದರಂತೆಯೇ ವ್ಯಾಪಾರವು ಬೆಳೆಯುತ್ತ ನಡೆದಿದೆ. ಎಲ್ಲಿ ನೋಡಿದಲ್ಲಿ ಬೀಳುಬಿದ್ದ, ಹಾಗು ಬಂಜೆ ನೆಲಗಳಿಂದ ಆವರ್ತವಾದ, ದುರ್ಜಲವಾದ ಮತ್ತು ಕ್ಷೀಣವಾದ ಹಳ್ಳಿಗಳ ಬದಲು ಮನೋಹರವಾದ ಬೆಳೆಗಳುಳ್ಳ ಪ್ರದೇಶವು ಪ್ರಕಟವಾಗಿ, ಧನ್ಯಧಾನ್ಯಗಳೂ, ಸಧನರೂ ಆದ ರೈತರ, ನಗೆಮುಖಗಳಿಂದ ಶೋಭಿಸುತ್ತಿರುವ ಹಳ್ಳಿಗಳು ಪಂಜಾಬದಲ್ಲಿ, ಇದೀಗ, ಎಲ್ಲಿ ನೋಡಿದಲ್ಲಿಯೂ ಕಂಗೊಳಿಸುತ್ತಲಿರುವವು. ಇದೇ ಪ್ರಕಾರವಾಗಿ ಮುಂಬಯಿ ಕರ್ನಾಟಕದಲ್ಲಿಯೂ, ಮದ್ರಾಸ ಇಲಾಖೆಯಲ್ಲಿಯೂ ಬೇರೆಬೇರೆ ಸಂಸ್ಥಾನಗಳಲ್ಲಿಯೂ ನೀರು ಕಟ್ಟಿ, ಕಾಲುವೆಗಳನ್ನು ತೆಗೆಯಿಸಿ, ಪಂಜಾಬದ ಶ್ರೇಷ್ಠವಾದ ಉದಾಹರಣೆಯನ್ನು ಆದರ್ಶವಾಗಿಟ್ಟುಕೊಂಡು, ಎಲ್ಲ ಪ್ರಾಂತಿಕ ಸರಕಾರದವರೂ, ಸಂಸ್ಥಾನದ ಅಧಿಪತಿಗಳೂ ತಮ್ಮ ತಮ್ಮ ಪ್ರಜಾಜನರ ಹಿತಕಲ್ಯಾಣಕ್ಕಾಗಿ ವೆಚ್ಚಿದಷ್ಟು ಹಣವನ್ನು, ಈ ಸಂದರ್ಭದಲ್ಲಿ ವಿಶೇಷವಾಗಿ ಹೇಳಬೇಕೆಂದು ನಾನು ಅವರೆಲ್ಲರಿಗೂ ಆಗ್ರಹಪೂರ್ವಕವಾಗಿ ಬೇಡಿಕೊಳ್ಳುತ್ತೇನೆ. ತಮ್ಮ ಸಂಸ್ಥಾನದಲ್ಲಿ ನೀರಾವರಿಯ ವ್ಯವಸ್ಥೆಯನ್ನು ಸ್ಥಿರಪಡಿಸಿದ ಬಗ್ಗೆ ಮೈಸೂರು ಸರಕಾರದವರ ಹಾಗೂ ಸಂಸ್ಥಾನಾಧಿಪತಿಗಳಾದ ಶ್ರೀಮನ್ ಮಹಾರಾಜರವರ ಅಭಿನಂದನಗಳನ್ನು ಎಷ್ಟು ಮಾಡಿದರೂ ತೀರದು ಮುಂಬಯಿ ಸರಕಾರದವರಾದರೂ ಸಿಂಧಭಾಗದಲ್ಲಿಯೂ, ಮಹಾರಾಷ್ಟ್ರದಲ್ಲಿಯೂ ಕಾಲುವೆಗಳ ಸಲುವಾಗಿ ಹಣವನ್ನು ಇದುವರೆಗೆ ಹೇರಳವಾಗಿ ವೆಚ್ಚ ಮಾಡಿದ್ದರಿಂದ. ಈಗಲೂ ಮಾಡುತ್ತಿದ್ದುದರಿಂದ ಅವರು ಈ ಸತ್ಕಾರ್ಯವನ್ನು ನೆರವೇರಿಸಿದ್ದಕ್ಕಾಗಿ ಸ್ತುತಿಗೆ ಪಾತ್ರರಾಗುವರು. ಮಾತ್ರ, ಕರ್ನಾಟಕದ ಕಡೆಗೆ ಉಪೇಕ್ಷೆ ಮಾಡಿದ್ದಕ್ಕಾಗಿ ಈ ಬಗೆಯ ಉಪೇಕ್ಷೆಯ ಸಂಗತಿಯನ್ನು ನಾನು ಮುಂಬಯಿ ಸರಕಾರದವರ ನಿದರ್ಶನಕ್ಕೆ ತರದೆ ಇರಲಾರೆನು. ಮುಂಬಯಿ ಸರಕಾರದವರು ಇನ್ನಾದರೂ, ಕರ್ನಾಟಕದ ಈ ಕೊರತೆಯನ್ನು ಲಕ್ಷೀಕರಿಸಿ, ಅದನ್ನು ದೂರಮಾಡುವ ಉಪಾಯ ಚಿಂತನೆಗೆ ಕೈಗೊಟ್ಟು, ಶೀಘ್ರದಲ್ಲಿಯೇ ಆ ಕಾರ್ಯವನ್ನು ಕೈಕೊಂಡಾರೆಂದು ನಂಬಿದ್ದೇನೆ, ಆ ಬಗ್ಗೆ ಸರಕಾರದವರಿಗೆ ನಾನು ಪ್ರಾರ್ಥಿಸುತ್ತೇನೆ.

ಸಹಕಾರೀ ಸಂಘಗಳೂ ಬ್ಯಾಂಕಗಳೂ.

ನಮ್ಮ ಹಿಂದಿನ ಸಮಾಜ ರಚನೆಯಲ್ಲಿಯೇ ಸಂಪೂರ್ಣ ಸಹಕಾರಿತೆಯು ಸಂಘಟಿತ ಸ್ವರೂಪದ ಕುಟುಂಬ ವ್ಯವಸ್ಥೆಯಿಂದಾಗಿ ಇದ್ದಿತು. ಇದೇ ಕುಟುಂಬದಲ್ಲಿಯ

ಸಂಪಾದಿಸುವ ವ್ಯವಸಾಯವನ್ನೂ ವೈಜ್ಞಾನಿಕ ಮಾರ್ಗದಿಂದಲೇ ಉಪಯೋಗಿಸಬೇಕೆಂಬ ಮನಸ್ಸುಳ್ಳವರೂ ತಮ್ಮ ದೂರದೂರದ ಸಿಂಧೂ ಪ್ರಾಂತಕ್ಕೆ ಹೋಗಿ, ಅಲ್ಲಿ ವಸಾಹತುಮಾಡಿಕೊಳ್ಳುವದು ಒಳ್ಳೇದು. ಈ ಮಹತ್ವದ ವಿಷಯವನ್ನು ನಮ್ಮ ಸರಕಾರದವರು ಲಕ್ಷ್ಯಪೂರ್ವಕವಾಗಿ ಅವಲೋಕಿಸಬೇಕೆಂದು, ನಾನು ಆಗ್ರಹಪೂರ್ವಕವಾಗಿ ಸೂಚಿಸುತ್ತೇನೆ.

ಮತ್ತೊಂದು ಸಂಗತಿ ಏನೆಂದರೆ—ಕರ್ನಾಟಕದ ಮುಖ್ಯ ಬೆಳೆಗಳು ಕಾಲಾಲಿಕ ಮಳೆಯ ಮೇಲೆಯೇ ಅವಲಂಬಿಸಿರುವವು. ಇತ್ತೀಚೆಗೆ ಸಕಾಲಕ್ಕೆ ಸಾಕಷ್ಟು ಮಳೆಯು ಆಗದೆ ಇದ್ದುದರಿಂದ ರೈತರಿಗೆ ಕಷ್ಟಗಳು ಉಂಟಾಗುತ್ತಿವೆ. ಈ ತಾಪತ್ರಯವನ್ನು ತಪ್ಪಿಸಬೇಕಾದರೆ, ನಾಡಿನಲ್ಲಿ ಹೊಳೆ ಮತ್ತು ಕೆರೆಗಳಿಂದ ನೀರಿನ ಸಂಗ್ರಹವನ್ನು ಮಾಡಿ ಕಾಲುವೆಗಳನ್ನು ತಂದು, ಭೂಮಿಗಳನ್ನು ನೀರಾವರಿ ಮಾಡಿಕೊಳ್ಳುವದು ಒಳ್ಳೇದು. ಹಾಗು ಮಳೆಯಿಂದ ಬಿದ್ದ ನೀರು ಹರಿದು ಹೋಗದಂತೆ ಭೂಮಿಗಳಿಗೆ ಒಡ್ಡುಗಳನ್ನು ಹಾಕಿಕೊಳ್ಳುವದರಿಂದ ಸ್ವಲ್ಪ ಮಳೆಯಾದರೂ ಭೂಮಿಯಲ್ಲಿಯ ಹಸಿಯನ್ನು ಬಹಳ ವೇಳೆ ಉಳಿಸಲಿಕ್ಕೆ ಬರುತ್ತದೆ. ಈ ವಿಷಯದಲ್ಲಿ ವಿಜಾಪೂರ ಜಿಲ್ಲೆಯು, ಜನ ಪ್ರೀತಿಯನ್ನು ಸಂಪಾದಿಸಿದ ಮಿ. ಪ್ರೈಸರ ಕಲೆಕ್ಟರವರು, ಮುಜುಮದಾರ ನಾಯಿಕ ಸಾಹೇಬ ಕಲೆಕ್ಟರರವರು, ತಮ್ಮ ಜಿಲ್ಲೆಯಲ್ಲೆಲ್ಲ ಭೂಮಿಗಳಿಗೆ ಒಡ್ಡುಗಳನ್ನು ಹಾಕುವದಕ್ಕೆ ಉತ್ತೇಜನಕೊಡುತ್ತಿದ್ದಾರೆ. ಒಡ್ಡುಗಳಿಂದ ಕೆಲಮಟ್ಟಿಗೆ ಹಿತವಾಗಬಹುದು; ಆದರೆ ಪೂರಾ ಕ್ಷಾಮವನ್ನೇ ತಪ್ಪಿಸಬೇಕಾದರೆ, ನೀರಿನ ಕಾಲುವೆಗಳನ್ನು ಏರ್ಪಡಿಸುವ ಯೋಗ್ಯವೂ, ಅಷ್ಟು ಫಲದಾಯಕವೂ ಇತರ ಯಾವ ಸಾಧನಗಳೂ ಆಗಲಾರವು. ಆದ್ದರಿಂದ ಸರಕಾರದವರು ಈ ಕರ್ನಾಟಕ ಪ್ರಾಂತದಲ್ಲಿ ನೀರು ಕಟ್ಟೆ ಕಾಲುವೆಗಳನ್ನು ಮಾಡುವ ಸಂದರ್ಭದಲ್ಲಿ ಹೆಚ್ಚು ಮನಸ್ಸು ಹಾಕಿ, ಅದಕ್ಕಾಗಿ ಹೆಚ್ಚು ಹಣವನ್ನು ವೆಚ್ಚ ಮಾಡಬೇಕೆಂದು ನನ್ನ ಅತ್ಯಂತ ವಿನಂತಿ ಇದೆ. ಒಂದು ವೇಳೆ ಸರಕಾರಕ್ಕೆ ಈ ವಿಷಯದಲ್ಲಿ ವೆಚ್ಚ ಮಾಡಿದ ಹಣಕ್ಕೆ ನೀರಿನ ತೆರಿಗೆಯಿಂದ, ಸಾಕಷ್ಟು ಪ್ರತಿಫಲವು ಸಿಗದಿದ್ದರೂ, ಜನರ ಸಾಂಪತ್ತಿಕ ಸ್ಥಿತಿಯು ಹೆಚ್ಚಿ ದೇಶದ ಬೆಳವಣಿಗೆಗೆ ಸಹಾಯವಾಗುವದಲ್ಲದೆ, ಕ್ಷಾಮಪೀಡಿತರಾದ ದುರ್ಬಲ ರೈತರು ಹೋಗಿ, ದೇಶದಲ್ಲಿ ಸಶಕ್ತರಾದ ಹಾಗು ಸಧನರಾದ ರೈತರು ತಲೆದೋರುವರು. ಇದರಿಂದ ಜನರಲ್ಲಿ ಸುಖಸಮಾಧಾನಗಳು ಹೆಚ್ಚಾಗಿ, ಸರಕಾರಕ್ಕೆ ಬೇರೆ ಬೇರೆ ಬಗೆಯಿಂದ ತಮ್ಮ ತನು-ಮನ-ಧನಗಳನ್ನರ್ಪಿಸಿ ಸಹಾಯ ಮಾಡಲು ಸಮರ್ಥರಾಗುವರು. ಆದುದರಿಂದ ಇವೆಲ್ಲ ಫಲಿತಾಂಶಗಳನ್ನು ಸರಕಾರದವರು, ಲಕ್ಷ್ಯಪೂರ್ವಕವಾಗಿ ಪರ್ಯಾಲೋಚಿಸಿಕೊಂಡು, ನೀರಿನ ಕೊರತೆಯನ್ನು ಪರಿಹರಿಸಿ, ಕ್ಷಾಮಪೀಡೆಯನ್ನು ನಿರ್ಮೂಲ ಮಾಡಿ, ಪ್ರಜೆಗಳ ಪ್ರೇಮಾದರಕ್ಕೆ ಪಾತ್ರರಾಗುವರೆಂದು ನಾನು ಪೂರ್ಣನಂಬಿದ್ದೇನೆ.

ಮುಂತಾದವುಗಳಲ್ಲಿಯಾದರೂ ನಮ್ಮ ಸಮಾಜದ ಪ್ರತಿನಿಧಿಗಳು ಹೆಚ್ಚಾಗಿ ಸೇರಲಿಕ್ಕೆ ಅನುಕೂಲವಾಗುವದು. ಇದಲ್ಲದೆ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಲ್ಲಿಯೂ ನಮ್ಮ ಪ್ರಯತ್ನದಿಂದ ಹೆಚ್ಚು ಜನರು ಸೇರುತ್ತ ಬಂದಕೂಡಲೆ ಅನುಕೂಲವಾಗುತ್ತದೆ. ಸಮಾಜದ ಕೊರತೆಗಳನ್ನು, ಸಂಘ ಶಕ್ತಿಯ ಒಂದೇ ಮುಖದಿಂದ ಸರಕಾರದವರ ಮುಂದೆ ಇಟ್ಟು ಅವನ್ನು, ಸರಕಾರದಿಂದ ಪರಿಹರಿಸಿಕೊಳ್ಳುವದಕ್ಕೆ ಬಹಳ ಸುಲಭವಾಗುವದು. ಈ ಸಾಧನದಿಂದ ನಮ್ಮ ಸಮಾಜದವರ ಅಡಚಣೆಗಳು ದೂರಾಗುವವು. ಈ ವಿಷಯದಲ್ಲಿ ನಮ್ಮ ಸಮಾಜದವರಿಗೆ ಹೆಚ್ಚು ಹೆಚ್ಚು ಎಚ್ಚರಗೊಳಿಸಬೇಕು. ಸಮಾಜ ಶಿಕ್ಷಣ, ಎಚ್ಚರವನ್ನುಂಟು ಮಾಡಿ, ಸಮಾಜದ ಮತ್ತು ದೇಶದ ಹಿತವನ್ನು ಸಾಧಿಸಲಿಕ್ಕೆ ಬೇಕಾಗುವ ಸಮುದಾಯ ಶಿಕ್ಷಣ ಪದ್ಧತಿಗಳಿಗೆ ಕೆಲಸ ಮಾಡಲಿಕ್ಕೆ, ಇದೇ ದೊಡ್ಡ ಕ್ಷೇತ್ರವಿರುವದು.

ಕನ್ನಡ ಸಾಹಿತ್ಯವು.

ಕನ್ನಡ ಭಾಷೆಯು ಹಿಂದಿನ ರಾಷ್ಟ್ರಭಾಷೆಯು. ಕನ್ನಡ ಭಾಷೆಯು ಒಂದು ಕಾಲಕ್ಕೆ ಇಡೀ ದಕ್ಷಿಣ ಹಿಂದುಸ್ಥಾನದಲ್ಲೆಲ್ಲ ಹಬ್ಬಿತ್ತು. ಕೆಲವು ರಾಜಕೀಯ ಹಾಗೂ ಇನ್ನಿತರ ಕಾರಣಗಳಿಂದ ಕನ್ನಡ ಭಾಷೆಯು ಕರ್ನಾಟಕದಲ್ಲಿ ಮಾತ್ರ ಉಳಿದಿರುತ್ತದೆ. ಆದುದರಿಂದ ಕನ್ನಡಿಗರು ಇದ್ದಲ್ಲೆಲ್ಲ ತಮ್ಮ ರಾಷ್ಟ್ರಭಾಷೆಯ ಶಾಲೆಗಳನ್ನು ಸ್ಥಾಪಿಸಿಕೊಳ್ಳಲಿಕ್ಕೆ ಪ್ರಯತ್ನ ಮಾಡಬೇಕು. ಸ್ವಭಾಷೆಯಲ್ಲಿ ವಿದ್ಯಾ ಪ್ರಸಾರವನ್ನು ಮಾಡುವದು, ಸ್ವಭಾಷೆಯಲ್ಲಿ ಎಲ್ಲ ಪ್ರಕಾರದ ಗ್ರಂಥಗಳನ್ನು ರಚಿಸುವದು, ಕನ್ನಡ ವಾಙ್ಮಯದ ಬೆಳವಣಿಗೆಗೆ ಅವಶ್ಯವಾಗಿರುತ್ತದೆ. ಕನ್ನಡ ಭಾಷೆಯು ಸರಳವಾದದ್ದು; ಪ್ರಾಚೀನವಾದದ್ದು; ಮೇಲಾಗಿ ವಿಸ್ತೃತವಾದ ರಾಷ್ಟ್ರಭಾಷೆಯಾಗಿದ್ದರಿಂದ, ಹಿಂದಿನಂತೆ ಕನ್ನಡ ಸಾಹಿತ್ಯವನ್ನು ಹೆಚ್ಚಿಸಲಿಕ್ಕೆ ಮನಃಪೂರ್ವಕ ಪ್ರಯತ್ನ ಮಾಡಬೇಕು.

ಕರ್ನಾಟಕ ಏಕೀಕರಣ.

ಈ ವಿಷಯವು ಅತ್ಯಂತ ಮಹತ್ವದ್ದು. ಆದ್ದರಿಂದ ಅದನ್ನು ಸಾಧಿಸಿಕೊಳ್ಳುವದೂ ಕಷ್ಟಸಾಧ್ಯವಾದದ್ದು. ಕನ್ನಡ ಭಾಷೆಯು ನಡೆಯುತ್ತಿದ್ದ ಭಾಗಗಳೆಲ್ಲ ಒಂದೇ ಆಡಳಿತದಲ್ಲಿ ಇಲ್ಲದಿದ್ದ ಮೂಲಕ, ಕನ್ನಡ ವಾಙ್ಮಯಕ್ಕೆ ಒಂದು ಪ್ರಕಾರದ ಅನನುಕೂಲತೆಯಾಗಿರುವದು. ಕನ್ನಡಿಗರಲ್ಲಿ ಪರಸ್ಪರ ಸಹಾನುಭೂತಿಯು ಕಡಿಮೆಯಾಗಿದೆ. ಕನ್ನಡಿಗರ ಸಂಸ್ಕೃತಿಯ ನಾಶದಿಂದ ಅವರ ರಾಜಕೀಯ ಜೀವನವು ಬೇಕಾದಷ್ಟು ಮುಂದುವರಿದಿಲ್ಲ. ಕನ್ನಡ ಪ್ರದೇಶಗಳು ಬೇರೆ ಬೇರೆ ಆಡಳಿತಕ್ಕೆ ಅಂಕಿತವಾದ್ದರಿಂದ, ಕನ್ನಡಿಗರೆಲ್ಲರಿಗೂ ಸಮಾನವಾಗಿದ್ದ ಕೊರತೆಗಳ ಪ್ರಾತಿನಿಧ್ಯ

ವೇಳೆ ನಮ್ಮ ಸಮಾಜವು ಅಲ್ಪ ಸಂಖ್ಯಾತವಾಗಿದ್ದರೆ ಮಾತ್ರ ಹೆಚ್ಚಾಗಿ ನಮ್ಮ ಜನರು ನೌಕರಿಯಲ್ಲಿ ಸೇರಹೋಗಿದ್ದರಿಂದ ವ್ಯಾಪಾರೋದ್ಯೋಗ ಕೃಷಿಕರ್ಮದ ಕಡೆಗೆ ನಮ್ಮ ಅಲಕ್ಷ್ಯವಾಗುವ ಸಂಭವವಿತ್ತು. ಆದರೆ ನಮ್ಮ ಸಮಾಜದಲ್ಲಿ ಮೂವತ್ತೈದು ಲಕ್ಷ ಜನರಿದ್ದು, ಸಾವಿರಕ್ಕೆ ಒಬ್ಬರು, ಅಥವಾ ಇಬ್ಬರು ಅಂಥ ನೌಕರಿಗಳಲ್ಲಿ ಸೇರಿದರೆ, ನಮ್ಮ ಸಮಾಜಕ್ಕೆ ಯಾವ ಹಾನಿಯೂ ಆಗದೆ, ವ್ಯಾಪಾರೋದ್ಯೋಗಗಳಿಗೆ ಯಾವ ರೀತಿಯಿಂದಲೂ ಅಡ್ಡಿಯಾಗದೆ, ಲಾಭವಾಗುವದು. ಇದರಿಂದ ನಮ್ಮಲ್ಲಿಯ ಅತಿಸಂಖ್ಯಾಕರು ನೌಕರಿಯಲ್ಲಿ ಸೇರಬೇಕೆಂತಲೂ ನಾನು ಪ್ರತಿಪಾದಿಸುವದಿಲ್ಲ, ಹಾಗು ಅದು ಸಾಧ್ಯವಾಗುವ ಮಾತೂ ಅಲ್ಲ. ಈ ಸಂದರ್ಭದಲ್ಲಿ ಮುಂಬೈ, ಮದ್ರಾಸ, ಹಾಗೂ ಮೈಸೂರು ಸರಕಾರದವರು ತಮ್ಮ ತಮ್ಮ ಇಲಾಖೆಗಳಲ್ಲಿ ಸರಕಾರೀ ನೌಕರಿಗಳು ವಿಶಿಷ್ಟವರ್ಗದವರ ಕೈಯಲ್ಲಿರದೆ ಎಲ್ಲ ಜನತೆಯ ಕೈಯಲ್ಲಿಯೂ ಇರಬೇಕೆಂಬ ದೃಷ್ಟಿಯಿಂದ ಕೆಲವು ಠರಾವುಗಳನ್ನು ಪಾಸುಮಾಡಿ ಅವುಗಳನ್ನು ಅಮಲಿನಲ್ಲಿ ತರುತ್ತಿದ್ದಾರೆ. ಇದಕ್ಕಾಗಿ ನಾನು ಮೇಲ್ಕಂಡ ಸರಕಾರದವರನ್ನು ಅಭಿನಂದಿಸುತ್ತೇನೆ.

ಕಾಯಿದೇಶೀರ ರಾಜಕೀಯ ಚಳವಳಿಗಳಲ್ಲಿಯೂ ನಮ್ಮ ಸಮಾಜವು ಹೆಚ್ಚು ಹೆಚ್ಚು ಮನಸ್ಸುಹಾಕುವದು, ಯಥಾಕ್ರಮವಾಗುತ್ತದೆ. ಆದರೆ ಈ ಸಂದರ್ಭದಲ್ಲಿ ನಮ್ಮ ಸಮಾಜವು ಸಂಘಟಿತ ಸ್ವರೂಪದಿಂದ ಮುಂದರಿದರೆ ಎಷ್ಟು ಗೌರವವಿದೆಯೊ, ಅಷ್ಟು ಗೌರವವು ವಿಚ್ಛಿನ್ನವಾದ ಪ್ರಯತ್ನಗಳಿಗೆ ದೊರೆಯಲಾರದು. ಅದಕ್ಕಾಗಿ ನಮ್ಮ ಸಮಾಜದಲ್ಲಿ ಸಂಘಟಿತ ಹಾಗು ಸುವ್ಯವಸ್ಥಿತವಾದ ಸಂಸ್ಥೆಗಳಿರುವದು ಅವಶ್ಯವಿರುತ್ತದೆ. ಸಂಘಟನಾತ್ಮಕವಾಗಿ ಏಕ ಮುಖದಿಂದ ನಾವು ಮಾಡುವ ಪ್ರಯತ್ನಗಳಿಗೆ ಸಾಕಷ್ಟು ಯಶಸ್ಸು ದೊರೆಯುವದು. ಇಂಥ ಸಂಘಟನೆಗಳ ಮುಖಾಂತರವೇ ಅನ್ಯ ಸಮಾಜಗಳು ಪಡೆದುಕೊಳ್ಳುತ್ತಿರುವ ಲಾಭವನ್ನು ನಾವು ದಿನಾಲು ನೋಡುತ್ತೇವೆ, ಆದುದರಿಂದ ನಮ್ಮ ಸಮಾಜದಲ್ಲಿ ಸುವ್ಯವಸ್ಥಿತವಾದ, ಸುಸಂಘಟಿತವಾದ, ರಾಜಕೀಯ ಸಂಸ್ಥೆಗಳಿರುವದು ಶ್ಲಾಘನೀಯವೆಂದು ನಾನು ಮನಃಪೂರ್ವಕವಾಗಿ ಹೇಳುತ್ತೇನೆ.

ಸಮಾಜದ ಹಿತಾಹಿತವನ್ನು ವಿಚಾರಮಾಡಿ, ಗುಣಾವಗುಣಗಳನ್ನು ನೋಡಿ ಅಂತಿಮ ಪರಿಣಾಮವನ್ನು ಸಂಶೋಧಿಸಿ, ಜನಸಾಮಾನ್ಯರಿಂದ ಸಾರ್ವಜನಿಕ ಕಾರ್ಯದಲ್ಲಿ ಸ್ವಾರ್ಥವನ್ನು ಬದಿಗಿಟ್ಟು [illegible] ಕೈ ಹಾಕತಕ್ಕದ್ದು. ಇಂಥ ಕಾರ್ಯಗಳಿಗೂ ಸಮಾಜದಲ್ಲಿ ಸಂಘಟನೆ ಬೆಳೆಯಬೇಕು. ಆದುದರಿಂದಲೂ ಮತ್ತೆ, ನಮ್ಮ ಸಮಾಜದಲ್ಲಿ ಸಂಘಟಿತ ಸಂಸ್ಥೆಗಳನ್ನು ಸ್ಥಾಪಿಸುವದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿರುತ್ತದೆ. ಇಂಥ ಸಂಘಟನಾ ಪ್ರಯತ್ನಗಳಿಂದ ಕಾಯಿದೆ

೧)

ಭಾರತೀಯ ಬೃಹದ್ರಾಜ್ಯದ ವೀರಶೈವರ ಅಸ್ತಿತ್ವವನ್ನು ಸಂರಕ್ಷಿಸುವದು.

ಪ್ರಜಾಸತ್ತಾತ್ಮಕ ರಾಜ್ಯಭಾರದ (ಸ್ವರಾಜ್ಯದ) ಧ್ಯೇಯವುಳ್ಳ ಕಾಲದಲ್ಲಿ ರಾಜಕೀಯ ಶಕ್ತಿಯು (Political power) ಯಾವದೊಂದು ವಿಶಿಷ್ಟವಾದ ಜಾತಿಯಲ್ಲಿ ಇಲ್ಲವೆ ವರ್ಗದಲ್ಲಿಯೇ ಸಂಪೂರ್ಣವಾಗಿ ಕೇಂದ್ರೀಕರಿಸದೆ ಆ ಶಕ್ತಿಯು ಎಲ್ಲ ಸಮಾಜಗಳಲ್ಲಿಯೂ ಅರ್ಥಾತ್ ಜನತೆಯಲ್ಲಿಯೂ ಸಮಾನವಾಗಿ ಪ್ರಸಾರವಾಗುವ ಹಾಗೆ ಮಾಡುವದು ದೇಶದ ಕಲ್ಯಾಣದ ದೃಷ್ಟಿಯಿಂದ ಅವಶ್ಯಕವು. ಹೀಗೆ ಮಾಡ ಬೇಕಾದರೆ ನಮ್ಮ ಸಮಾಜದ ರಾಜಕೀಯ ಅಸ್ತಿತ್ವವನ್ನು ನಾವು ಕಾಪಾಡಿಕೊಳ್ಳು ವದು ಅವಶ್ಯವಿರುತ್ತದೆ. ಹಿಂದುಸ್ಥಾನದಲ್ಲಿ ಬ್ರಿಟಿಶ ರಾಜ್ಯಾಡಳಿತಕ್ಕೆ ಆರಂಭ ವಾದಂದಿನಿಂದ, ಒಂದೇ ವಿಶಿಷ್ಟ ವರ್ಗದ ಕೈಯಲ್ಲಿಯೇ ಅಧಿಕಾರ ಸೂತ್ರಗಳು ಸೇರಿ ಕೊಂಡದ್ದರ ಪರಿಣಾಮವನ್ನು ಇಲ್ಲಿ ವರ್ಣಿಸಬೇಕಾಗಿಲ್ಲ. ತೀರ ಮೊನ್ನೆ ಮೊನ್ನಿನ ವರೆಗೂ, ರಾಜಕೀಯ ವಿಷಯಗಳಲ್ಲಿ ನಮ್ಮ ಸಮಾಜವು ಅನಾದರವನ್ನು ತೋರಿಸುತ್ತ ಬಂದದರಿಂದ ನಮ್ಮ ಸಮಾಜದ ಹಾನಿಯೆಷ್ಟಾಗಿರುತ್ತದೆಂಬದನ್ನು ಎಲ್ಲರೂ ಬಲ್ಲರು. ನಾವು ವ್ಯಾಪಾರಸ್ಥರು; ನಾವು ಕೃಷಿಕರ್ಮವನ್ನು ಅವಲಂಬಿಸಿದವರು; ಅದ್ದರಿಂದ ರಾಜಕೀಯ ವಿಷಯಗಳಲ್ಲಿ ನಾವು ಕೈಹಾಕಲೇ ಬಾರದೆಂಬ ಸಂಕುಚಿತವಾದ ಮತ್ತು ಅನಾದರದ ಕಲ್ಪನೆಯು ನಮ್ಮ ಸಮಾಜದಲ್ಲಿ ಇತ್ತೀಚೆಯವರೆಗೂ ಇತ್ತು. ಈ ತರದ ಅನಾದರವನ್ನು ತೋರಿಸುತ್ತ ಬಂದದರಿಂದ ನಮ್ಮ ಸಮಾಜಕ್ಕೆ ಸಿಗಬೇಕಾದ ಷ್ಟು ನೌಕರಿಗಳು ಸಿಕ್ಕಿರಲಿಲ್ಲ. ಇದಕ್ಕೆ ಹಳೇಕಲ್ಪನೆಗಳಿಗೆ ಮೀರಿದ ಮಹ ತ್ವವನ್ನು ಕೊಟ್ಟು ಗತಾನುಗತಿಕರಾಗಿ ಉಳಿದುಕೊಳ್ಳುವ ಮನಃಪ್ರವೃತ್ತಿಯೇ ಕಾರಣ ವಾಗಿದೆ.

ಸರಕಾರೀ ನೌಕರಿಗಳನ್ನು ಮಾಡುವದೂ ಅಂಥ ನೌಕರಿಗಳಲ್ಲಿ ಸೇರಬಯಸು ವದೂ ಕೇವಲ ಉದರಂಭರಣದ ಸಲುವಾಗಿಯೇ ಎಂದು ಕೆಲವು ದಿವಸಗಳಾಚೆ ನಮ್ಮ ಸಮಾಜದ ಕಲ್ಪನೆ ಇತ್ತು; ಆದರೆ, ರಾಜ್ಯಸೂತ್ರಗಳ ಮರ್ಮವನ್ನರಿಯು ವದಕ್ಕಾಗಿಯೂ, ರಾಜ್ಯಕಾರಭಾರವನ್ನು ನಡೆಯಿಸುವ ಯೋಗ್ಯತೆಯು ಪ್ರಾಪ್ತಿ ಗಾಗಿಯೂ ಸರಕಾರೀ ನೌಕರಿಗಳಲ್ಲಿ ಸೇರ್ಪಡೆಯಾಗುವದೇ ರಾಜಮಾರ್ಗ ವೆಂದು ಆಗ ನಮ್ಮ ಸಮಾಜದವರ ಜ್ಞಾನಕ್ಕೆ ಬಂದಿರಲಿಲ್ಲ. ವೀರಶೈವ ಸಮಾಜವು ಕರ್ನಾಟಕದಲ್ಲಿಯೇ ವಿಶೇಷವಾಗಿದ್ದದರಿಂದ ರಾಜ್ಯಸೂತ್ರ ಪರಿಶೀಲನೆಗಾಗಿಯೂ ರಾಜ್ಯಕಾರಭಾರದ ಪರಿಪಾಟಿಗಳ ಜ್ಞಾನಮಾಡಿಕೊಳ್ಳುವದಕ್ಕಾಗಿಯೂ, ಸರಕಾರಿ ನೌಕರಿಗಳಲ್ಲಿ ನಮ್ಮಲ್ಲಿಯ ಕೆಲವು ಜನರು ಸೇರಿದರೆ, ನಮ್ಮ ಮೂಲ ಉದ್ಯೋಗ ಗಳಾದ ವ್ಯಾಪಾರ ಒಕ್ಕಲತನಗಳಿಗೆ ಜನರು ಕಡಿಮೆಯಾಗುವಂತಿಲ್ಲ. ಒಂದು

ಗುಣವಿಲ್ಲ. ಆದ್ದರಿಂದಲೇ ಸಾಧ್ಯವಾದ ಸ್ವತಂತ್ರ್ಯ [illegible]. ಕನ್ನಡಿಗರು ಬಹಳ [illegible] ಹಿಂದುಳಿದವರಾಗಿದ್ದಾರೆ. ಮುಂಬಯಿ ಪ್ರಾಂತದಲ್ಲಿ ಬಹು ಜನರಿದ್ದರೂ ಕನ್ನಡಿಗರು ಅಲ್ಪಸಂಖ್ಯಾತರಾಗಿದ್ದಾರೆ. ಮುಂಬಯಿ [illegible] ಇದೇ ಸ್ಥಿತಿಯುಂಟು. [illegible] ಪ್ರಾಂತಗಳಲ್ಲಿ ಕನ್ನಡಿಗರು ಅಲ್ಪಸಂಖ್ಯಾತರಾಗಿದ್ದುದರಿಂದ ಬಹಳ ಹಿಂದೆ ಬಿದ್ದ ರಾಜಕೀಯ ಪಕ್ಷಗಳ [illegible] ಬಲಿಯಾಗಿದ್ದಾರೆ. ಆದ್ದರಿಂದ ಕನ್ನಡಿಗರು [illegible] ಆಡಳಿತ [illegible] ಪ್ರತಿಯೊಂದು ನಷ್ಟವನ್ನು ಬಗೆಲ್ಲ. ಕರ್ನಾಟಕದ ಪ್ರಾಂತಕ್ಕೆ ಒಂದಾದ ಸರಕಾರವಿಲ್ಲ. ಆದ್ದರಿಂದ ಕರ್ನಾಟಕದ ಸ್ವಭಾವಕ್ಕೆ ಹೊಂದಿಕೊಳ್ಳುವುದು, ಸರಕಾರದಲ್ಲಿಯೇ ಇದು ಪ್ರಾಂತದ ಜನರನ್ನೂ ಸಂಪತ್ತು ಬೆಳೆಯುವುದಕ್ಕೆ ಅಡ್ಡಿಯಾಗಿದೆ. ಆದ್ದರಿಂದ ಬ್ರಿಟಿಷ [illegible]ಗಳಲ್ಲಿರುವ ಕನ್ನಡ ಜಿಲ್ಲೆಗಳನ್ನು ಒಂದೇ ಆಡಳಿತದಲ್ಲಿ ತರಬೇಕು, ಇದಕ್ಕಾಗಿ ಎಲ್ಲರೂ ಪ್ರಯತ್ನ ಮಾಡಬೇಕು. ಕನ್ನಡ ದೇಶವೆಲ್ಲವೂ ಒಂದೇ ಪ್ರಾಂತವಾದರೆ, ಅದರ ಒಂದೇ ಆಡಳಿತಕ್ಕೆ ಒಳಗಾದರೆ, ಕನ್ನಡಿಗರ ಕೊರತೆಗಳನ್ನು ನೀಗಿಕೊಳ್ಳುವುದಕ್ಕೆ ಬಹಳ ಅನುಕೂಲವಾಗಿ, ಕನ್ನಡಿಗರಲ್ಲಿ ಪರಸ್ಪರ ಸಹಾನುಭೂತಿಯು ಹೆಚ್ಚಾಗಿ, ಕನ್ನಡಿಗರ ಸಾಂಸ್ಕೃತಿಕ ಪ್ರಗತಿಗೂ ಬಹಳ ಅನುಕೂಲವಾಗುತ್ತದೆಂಬಲ್ಲಿ ಸಂದೇಹವಿಲ್ಲ.

ಬ್ರಿಟಿಶ್ ಹಿಂದುಸ್ಥಾನದಲ್ಲಿಯಂತೂ, ಕನ್ನಡಿಗರ ರಾಜಕೀಯ ಅಸ್ತಿತ್ವವು ಅಷ್ಟು ಇರುವದಿಲ್ಲ. ಈ ಶೋಚನೀಯ ಸ್ಥಿತಿಯನ್ನು ಹೋಗಲಾಡಿಸುವದು ನಮ್ಮ ಆದ್ಯ ಕರ್ತವ್ಯವಾಗುತ್ತದೆ. ಕನ್ನಡಿಗರ ಪ್ರಗತಿಯು, ಅವರ ರಾಜಕೀಯ ಅಸ್ತಿತ್ವದ ಮೇಲೆಯೇ ಪೂರ್ಣವಾಗಿ ಅವಲಂಬಿಸಿರುತ್ತದೆಂಬ ಮಾತನ್ನು ನಾವೆಲ್ಲರೂ ಚನ್ನಾಗಿ ಲಕ್ಷ್ಯದಲ್ಲಿಡತಕ್ಕದ್ದು. ನಮ್ಮ ಸಮಾಜಕ್ಕೆ ಹೆಚ್ಚಿನ ಹಿತವೂ ಹೆಚ್ಚಿನ ಲಾಭವೂ ಆಗಬೇಕಾದರೆ ಈ ಮಾತನ್ನು ನಾವೆಲ್ಲರೂ ಲಕ್ಷ್ಯದಲ್ಲಿಟ್ಟು, ಕರ್ನಾಟಕ ಏಕೀಕರಣದ ವಿಷಯದಲ್ಲಿ ಹೆಚ್ಚು ಹೆಚ್ಚು ಪ್ರಯತ್ನವನ್ನು ಮಾಡಬೇಕು. ನಮ್ಮ ಸಮಾಜವು ಬ್ರಿಟಿಶ್ ಕರ್ನಾಟಕದಲ್ಲಿ ಹೆಚ್ಚು ಪ್ರಮಾಣದಿಂದ ಇರುವದರಿಂದ, ಅದೊಂದು ಬೇರೆ ಕನ್ನಡ ಪ್ರಾಂತವಾದರೆ, ನಮ್ಮ ಸಮಾಜದ ಏಳಿಗೆಗೆ ಬಹಳ ಅನುಕೂಲವಾಗುವದು. ಅದರಂತೆ ಈ ನೋಟದಲ್ಲೇ, ಈ ವಿಷಯದ ಆಲೋಚನೆಯು ನಡೆದು, ಬೆಳಗಾಂವಿ, ಬಳ್ಳಾರಿ ಜಿಲ್ಲಾ ಜಿಲ್ಲೆಯ ಸಭೆಗಳಲ್ಲಿ ಇಂಥ [illegible] ಅಧ್ಯಕ್ಷರು ಹಾಗು [illegible], ಚಿಕ್ಕೋಡಿಯವರೇ ಅಧ್ಯಕ್ಷರಾದದ್ದು. ನಮ್ಮ ಸಮಾಜಕ್ಕೆ ಭೂಷಣವಾದ ಸಂಗತಿಯಾಗಿದೆ.

ಧಾರವಾಡ ಪ್ರಾಂತಿಕ ವೀರಶೈವ

ಶಿವಾನುಭವ ಸಮ್ಮೇಲನ

ಗದಗ

ಸ್ವಾಗತಾಧ್ಯಕ್ಷರ

ಭಾಷಣವು

ಸ್ವಾಗತಾಧ್ಯಕ್ಷರು:

ಶ್ರೀಮಾನ್ ಕೋಟಿ ತೋಟಪ್ಪನವರು, ಬಿ. ಎ. ಎಲ್ ಎಲ್. ಬಿ.

ತಾರೀಖು ೧--೫--೧೯೩೩

॥ ಶ್ರೀ ಸಿದ್ಧಲಿಂಗೇಶ್ವರ ಪ್ರಸನ್ನ ॥

ಪೂಜ್ಯರೇ, ಗುರು-ಹಿರಿಯರೇ,

ಸೋದರ-ಸೋದರಿಯರೇ,

ಶ್ರೀ ಜಗದ್ಗುರು ತೋಂಟದ ಮಹಾಸ್ವಾಮಿಗಳವರ ಜಾತ್ರೆಯ ಅಂಗವಾಗಿ ಈ ಹೊತ್ತು ಜರುಗಲಿರುವ ಧಾರವಾಡ ಪ್ರಾಂತಿಕ ವೀರಶೈವ ಶಿವಾನುಭವ ಸಮ್ಮೇಲನಕ್ಕೆ ತಮ್ಮೆಲ್ಲರನ್ನು ಆತ್ಮಾದರದಿಂದ ಸ್ವಾಗತಿಸುತ್ತೇನೆ. ಶಿವಾನುಭವದ ಆವಶ್ಯಕತೆಯನ್ನೂ, ಮಹತ್ವವನ್ನೂ ಬೇರೆ ಬೇರೆ ಕಡೆಯಿಂದ ಬಂದ ತಮ್ಮೆಲ್ಲ ಮಹನೀಯರ ಆಗಮನವೇ ಸೂಚಿಸುತ್ತದೆ. ಈ ಸಮ್ಮೇಲನವು ಗದಗಿನಲ್ಲಿ ನೆರೆಯುವದರಲ್ಲಿ ಕಾಂತಿ, ಗೌರವ ದ್ಯೋತಕವಾದ ಒಂದು ಸಮಾಜ ಸುಧಾರಣೆಯ ಪ್ರಯೋಜನವುಂಟು. ಈ ನಗರವು ಪುರಾತನವೂ ಬಹು ಸಂಖ್ಯಾಕ ವೀರಶೈವರಿಗೆ ಬೀಡಾದದ್ದು. ಇಲ್ಲಿ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠವು ಕಲಶಪ್ರಾಯವಾಗಿ ವಿರಾಜಿಸುತ್ತಿದೆ. ಹಾಗೂ ಆಂಗ್ಲ, ಸಂಸ್ಕೃತ ಪಾಠಶಾಲೆಗಳೂ, ಬಡ ವಿದ್ಯಾರ್ಥಿಗಳಿಗಾಗಿ ವೀರಶೈವರ ಧರ್ಮಾರ್ಥ ಪ್ರಸಾದನಿಲಯವೂ. ಹಾಲಕೆರೆ ಶ್ರೀಮನ್ನಿರಂಜನ ಅನ್ನದಾನೀಶ್ವರ ಸ್ವಾಮಿಗಳ ಆನಂದಾಶ್ರಮವೂ, ವೀರಶೈವ ಸಂಸ್ಕೃತಿ ಪ್ರಕಾಶಕ ಸಮಿತಿಯೂ. ಅಕ್ಕನ ಬಳಗವೂ ವೀರಶೈವ ತರುಣ ಸಂಘವೂ ಇರುವದರಿಂದ ಇಲ್ಲಿ ಈ ವರ್ಷ ಶಿವಾನುಭವ ಸಮ್ಮೇಲನವಾದದ್ದು ನಮ್ಮ ಗದಗಿನ ವೀರಶೈವರಿಗೆ ಭೂಷಣವೇ ಸರಿ.

ಈ ಶಿವಾನುಭವ ಸಮ್ಮೇಳನದ ಅಧ್ಯಕ್ಷಸ್ಥಾನವನ್ನು ಅಲಂಕರಿಸಲು ಪರಮ ಪೂಜ್ಯರೂ, ಶಿವಾನುಭಾವಿಗಳೂ, ಶಿವಯೋಗನಿಷ್ಠರೂ, ನಿರಪೇಕ್ಷರೂ ಆದ ಶ್ರೀಮನ್ನಿರಂಜನ **ಶಿವಬಸವ ಮಹಾಸ್ವಾಮಿಗಳು ಹುಕ್ಕೇರಿಮಠ,** ಹಾವೇರಿ ಈ ಮಹಿಮರು ಒಪ್ಪಿ, ನಮಗೆ ಅತ್ಯಂತ ಸಂತೋಷವನ್ನು ದಯಪಾಲಿಸಿರುವುದರಿಂದ ಇವರಿಗೂ ಅನನ್ಯ ಪ್ರೇಮ ಭಕ್ತಿಗಳಿಂದ ಸ್ವಾಗತವನ್ನು ಸಮರ್ಪಿಸುತ್ತೇನೆ.

ಇಂತಹ ಪುಣ್ಯಸಮಯದಲ್ಲಿ ಎಷ್ಟೋ ಮಂದಿ ಮಹಾಸ್ವಾಮಿಗಳೂ, ಪಂಡಿತರೂ, ಧೀಮಂತರೂ ದಯಮಾಡಿಸಿರುವುದು ನಮ್ಮ ಪರಮ ಭಾಗ್ಯ!

ಪ್ರಖ್ಯಾತ ಸದ್ವಿಭೂತಿಗಳಾದ ಶಿವಾನುಭಾವಿಗಳೂ, ಶಿವಾನುಭವ ಸಾಧಕರೂ ಗದಗಿನಲ್ಲಿ ನೆರೆಯಬೇಕೆಂಬ ನಮ್ಮ ಬಹು ದಿನದ ಹೆಬ್ಬಯಕೆ ಇಂದು ಕೊನೆಮುಟ್ಟಿದುದಕ್ಕೆ ನಮಗೆ ಹೇಳಲಾರದಷ್ಟು ಆನಂದ!

ಮಹಾನುಭಾವರಾದ ಬಸವಣ್ಣನವರು ನಿರ್ಮಿಸಿದ ಶಿವಾನುಭವ ಮಂಟಪದಲ್ಲಿ ಶಿವಾನುಭವದ ಚರ್ಚೆಯು ಎಷ್ಟು ಆಳವಾಗಿ ಸೊಗಸಿನಿಂದ ನಡೆಯುತ್ತಲಿದ್ದಿತೆಂಬ ಸಂಗತಿಯು ಆಗಿನ ಶರಣರ ವಚನಶಾಸ್ತ್ರದಿಂದ ತಿಳಿಯುತ್ತದೆ. ಅದೇ ಬಗೆಯಿಂದ ಮುಂದೆ ಸಾಗುತ್ತಬಂತು. ನಡುನಡುವೆ ಕಾಲವೈಚಿತ್ರ್ಯದಿಂದ ಅದಕ್ಕೆ ಗ್ಲಾನಿಯು ಮುಸುಗುತ್ತಲಿತ್ತು. ಕೆಲವು ಕಾಲದಲ್ಲಿ ಆ ಗ್ಲಾನಿಯು ತೊಲಗಿ ಮತ್ತೆ ಕಳೆದುಂಬಿ ಸಾಗುತ್ತಲೂ ಇತ್ತು. ಒಟ್ಟಾರೆ ಹೇಳಬೇಕೆಂದರೆ ಶಿವಾನುಭವವು ಎಂದಿಗೂ ವಿರಳಿತಗಳ ಪ್ರಮಾಣದಿಂದ ನಡೆಯುತ್ತಲಿದೆ ಗುರು. ವಿರಕ್ತ ಮಠಗಳಲ್ಲಿ ಸಾಗುತ್ತಲೇ ಇರುವುದು.

ಹೀಗೆನಂತಹ ಭೌತಿಕವಿದ್ಯೆ ಪ್ರಚಲಿತ ಕಾಲದಲ್ಲಿ ಕೂಡಾ ನಮ್ಮವರು ಶಿವಾನುಭವವನ್ನು ತ್ಯಜಿಸಿಲ್ಲ. ಇದು ತ್ಯಜಿಸುವಂತಹದೂ ಅಲ್ಲ. ಸರ್ವಸಂಗ ಪರಿತ್ಯಾಗಿಯಾದ ಉತ್ಕಟ ವಿರಾಗಿಯಿದ್ದರೂ ಒಮ್ಮೊಮ್ಮೆ ಹೊಟ್ಟೆಯಪಾಡಿಗೆ ಸಂಸಾರವನ್ನು ಆಶ್ರಯಿಸುವಂತೆ ಜೀವನವು ಭೋಗಾಸಕ್ತಿಯಿದ್ದರೂ ಜೀವಿಯು ಅಲ್ಲಿ ಕಾಣದ ಪರಮ ಶಾಂತಿಗಾಗಿ ಒಮ್ಮೊಮ್ಮೆ ಶಿವಾನುಭವಕ್ಕೆ ಬಾಯ್ದೆರೆಯಲೇ ಬೇಕಾಗುವದು. ಯಾವ ಲೋಕದಲ್ಲಿಯೂ, ಯಾವ ಪದವಿಗಳಲ್ಲಿಯೂ ಇಲ್ಲದ ಆತ್ಯಂತಿಕ ಸುಖವು ಶಿವಾನುಭವದಲ್ಲಿ ಉಂಟು. ಅಂತೇ ಇತ್ತೀಚಿಗೆ ಕನ್ನಡಿಗರಲ್ಲಿ ತಮ್ಮ ಸಾಹಿತ್ಯ, ಸಂಸ್ಕೃತಿಗಳನ್ನು ಪುನಃ ಪಡೆದು ಕಾಯ್ದುಕೊಳ್ಳಲಿಕ್ಕೆ ಹುರುಪಿನಿಂದ ಹೆಣಗಾಡತೊಡಗಿರುವರು. ಇದಕ್ಕೆ ಆಗಾಗ ಜರುಗುತ್ತಿರುವ ಸಾಹಿತ್ಯಸಭೆಗಳೂ, ಧಾರ್ಮಿಕ ಸಮ್ಮೇಲನಗಳೂ ಸಾಕ್ಷಿಯಾಗಿವೆ. ಶಿವಾನುಭಾವಿಗಳೇ ಪಾರಮಾರ್ಥಿಕ ಜಗತ್ತಿನಲ್ಲಿ ಮುಂದಾಳುಗಳು. ಅದರೆ ಶಿವಾನುಭಾವಿಗಳಿಂದ ನೆರವೇರುವ ಈ ಸಮ್ಮೇಲನವು ಶ್ರೀ ಜಗದ್ಗುರು ತೋಂಟದ ಸಿದ್ಧಲಿಂಗೇಶ್ವರರ ಕೃಪೆಯಿಂದ ನಮ್ಮ ಸಮಾಜದಲ್ಲಿ ಶಿವಾನುಭವದ ಇಚ್ಛಾಯತ್ನಗಳನ್ನು ಬೆಳೆಸದಿರಲಾರದೆಂದು ತುಂಬಾ ನಂಬಿರುವೆನು.

ಶ್ರೀ ಶಿವಾನಂದ ಮುದ್ರಣ, ಗದಗ.

[illegible]

[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]

[illegible]
[illegible]
[illegible]
[illegible]
[illegible]
[illegible]
[illegible]

Shrimanmaharaja Niranjana Jagadguru

Jontada Mahaswamigal.

Sansthan Math Dambal & Gadag.

[illegible] 1919

[illegible]

[illegible]

[illegible]

(౧౦)

(౧) మాకు క్షేమము కలదు మీ క్షేమము
[illegible]
[illegible]

శ్రీ [illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

యు మూడే లి [illegible] షలు ను సే యు న వ [illegible] లు వా కి ం చే

వ దు తీర్చా [illegible] లు ల్లు యి ల్లు యి [illegible] వ రి రి బా ం

గ. యి దా రి శి [illegible] రు వ లు యి [illegible] షం వే [illegible]

[illegible]

[illegible]

[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]

॥ [illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

ಶ್ರೀ ಬಸವೇಶ್ವರ ಪ್ರಸನ್ನ:

ಶ್ರೀ. ಜ. ಮು. ಫ್ರೀ ಬೋರ್ಡಿಂಗ ಧಾರವಾಡ ಶಿವಯೋಗೀಶ್ವರ ವಿದ್ಯಾಲಯದ ವಿದ್ಯಾರ್ಥಿಗಳಿಂದ ಪ್ರಸಿದ್ಧಿಸಲ್ಪಟ್ಟ ಬಸವ ಜಯಂತ್ಯುತ್ಸವ ಪತ್ರಿಕಾ.



ಬಸವಣ್ಣನವರ ಸಂಕ್ಷಿಪ್ತ ಚರಿತ್ರೆ.

ಶ್ರೀ ವೀರಶೈವ ಮಹೋದ್ಧಾರಕರಾದ ಮಹಾನುಭಾವರಾದ ಬಸವಣ್ಣನವರು ೮೦೦ ವರ್ಷಗಳ ಪೂರ್ವದಲ್ಲಿ ರಾ. ಶ. ೧೦೫೧ ನೆಯ ವೈಶಾಖ ಶುದ್ಧ ಅಕ್ಷಯ ತೃತೀಯಾದ ಶುಭ ಮುಹೂರ್ತದಲ್ಲಿ ವಿಜಾಪುರ ಜಿಲ್ಲೆಗೆ ಸೇರಿದ ಬಾಗೇವಾಡಿ ಗ್ರಾಮದಲ್ಲಿ ಅವತರಿಸಿದರು. ಅವರ ತಂದೆಯ ಹೆಸರು ಮಾದರಸ. ತಾಯಿಯ ಹೆಸರು ಮಾದಲಾಂಬಿಕೆ. ಈ ತಂದೆ-ತಾಯಿಗಳು ಆರಾಧ್ಯ ಬ್ರಾಹ್ಮಣರಾಗಿದ್ದರು. ಅವರ ವಂಶಜರು ಈಗಲೂ ಬಾಗೇವಾಡಿಯಲ್ಲಿ ಇರುತ್ತಾರಂತೆ.

ಬಸವಣ್ಣನವರು ಹುಟ್ಟಿದ ದಿನವೇ ಕೂಡಲ ಸಂಗಮದ ಜಾತವೇದ ಮುನಿಗಳು ಅವರಿಗೆ ಲಿಂಗಧಾರಣ ಮಾಡಿದರು. ಎಂಟನೆಯ ವರ್ಷದಲ್ಲಿ ಬಸವಣ್ಣನವರು ಉಪನಯನ ಸಂಸ್ಕಾರವನ್ನು ತಿರಸ್ಕರಿಸಿ ಕಪ್ಪಡಿ ಸಂಗಮಕ್ಕೆ ಹೋದರು. ಅವರ ಕೂಡ ಅಕ್ಕನಾಗಮ್ಮನವರೂ ಹೋದರು. ಆ ಗುರುಕುಲದಲ್ಲಿ ಬಸವೇಶ್ವರರೂ ಅಕ್ಕನಾಗಮ್ಮನವರೂ [illegible] ವರ್ಷಗಳ ವರೆಗೆ ಇದ್ದರು. ಧರ್ಮಪ್ರಸಾರದ ಕೆಲಸದಲ್ಲಿ ಅವರಿಬ್ಬರ ಸಹಾಯ [illegible] ಬಸವಣ್ಣನವರು ಇದೇ ಕಾಲಕ್ಕೆ ಕಪ್ಪಡಿಯಲ್ಲಿ ಜನ್ಮವೆತ್ತಿದರು. ತಮ್ಮ ೨೧ ನೆಯ ವರ್ಷದ ಸಮಯದಲ್ಲಿ ಬಸವೇಶ್ವರರು ಬಲದೇವ ಮಂತ್ರಿಯ ವಿಜ್ಞಾಪನೆಯ ಮೇರೆಗೆ ಕಲ್ಯಾಣಕ್ಕೆ ಹೋಗಿ ಆ ಮಂತ್ರಿಯ ಮಗಳಾದ ಗಂಗಾಂಬಿಕೆಯನ್ನು ವೀರಶೈವ ದೀಕ್ಷೆ ಕೊಡಿಸಿ ಮದುವೆಯಾದರು [illegible] ಬಿಜ್ಜಳರಾಯನ ಸಂಬಂಧಿಯಾದ ನೀಲಾಂಬಿಕೆಗೆ ದೀಕ್ಷೆ ಕೊಡಿಸಿ ಲಗ್ನವಾದರು. ಬಸವಣ್ಣನವರಿಗೆ ಬಾಲಸಂಗಯ್ಯನೆಂಬ ಮಗನು ಹುಟ್ಟಿದನು. ಆದರೆ ಆತನು ಚಿಕ್ಕಂದಿನಲ್ಲಿಯೇ ಶಿವಾಧೀನನಾದನು. ಬಲದೇವ ಮಂತ್ರಿಯು ಶಿವಾಧೀನನಾಗಲು ಬಸವಣ್ಣನವರೇ ಪ್ರಧಾನ ಪಟ್ಟಕ್ಕೆ ನಿಯಮಿಸಲ್ಪಟ್ಟರು. ಮುಂದೆ ಹತ್ತು ವರ್ಷಗಳವರೆಗೆ ಅವರು ಮುಖ್ಯ ಮಂತ್ರಿಯ ಕೆಲಸವನ್ನೂ ಧರ್ಮಪ್ರಸಾರಕರ ಕೆಲಸವನ್ನೂ ಒಳ್ಳೇ ಜೋರಿನಿಂದ ನಡೆಯಿಸಿದರು. ಅಷ್ಟರಲ್ಲಿ ಬಿಜ್ಜಳ ರಾಜನು ಹರಳಯ್ಯ, ಮಧುವಯ್ಯ ಎಂಬ ಶರಣರನ್ನು ವಧೆ ಮಾಡಿಸಿದ್ದಕ್ಕಾಗಿ ಬಸವೇಶ್ವರರು ಆ ಕೂಡಲಸಂಗಮದ ಗ್ರಾಮದಲ್ಲಿ [illegible] ಹೋಗಿ ಸಂಗಮನಾಥನಲ್ಲಿ ಐಕ್ಯರಾದರು. ನಂತರ ಸ್ವಲ್ಪ ದಿವಸಗಳಲ್ಲಿ ಬಿಜ್ಜಳನ ವಧೆಯಾಯಿತು. ಉಳಿದ ಶಿವಶರಣರು ಕಲ್ಯಾಣದಿಂದ ಹೊರಟು ಇಬ್ಭಾಗವಾಗಿ ಒಂದು ಭಾಗವು ಶ್ರೀಶೈಲಕ್ಕೆ ಮತ್ತೊಂದು ಭಾಗವು ಚನ್ನಬಸವೇಶ್ವರರನ್ನೊಡಗೊಂಡು ಉಳವಿಗೆ ಹೋಗಿ [illegible].

ಬಸವಣ್ಣನವರ ತತ್ವಗಳು.

ಬಸವೇಶ್ವರರು ಹುಟ್ಟಿ [illegible] ಹೊಸ ತತ್ವವನ್ನೇ ಹಾಕಿಬಿಟ್ಟರು. ಅವರ ಧರ್ಮಪ್ರಸಾರ ಮಾಡಿದ್ದು ಒಂದು ನೂತನ ವಿಧವೇ ಆಗಿದೆ. ಸನ್ಯಾಸ ವ್ರತವನ್ನು ಕೈಕೊಂಡಾಗಲಿ, ಇಲ್ಲವೆ ದೇಶದಲ್ಲೆಲ್ಲ ಸಂಚರಿಸಿ ಉಪದೇಶ ಮಾಡುತ್ತಾಗಲಿ ಧರ್ಮಪ್ರಸಾರ ಮಾಡಲಿಲ್ಲ. ಅವರು ಪ್ರಾಪಂಚಿಕರಾಗಿದ್ದು ಮಂತ್ರಿಪದದ ಕೆಲ

ಶ್ರೀ ಬಸವೇಶ್ವರ ಪ್ರಸನ್ನ॥

ಶ್ರೀ. ಜ. ಮು. ಫ್ರೀ ಬೋರ್ಡಿಂಗ ಧಾರವಾಡ ಶಿವಯೋಗೀಶ್ವರ ವಿದ್ಯಾಲಯದ ವಿದ್ಯಾರ್ಥಿಗಳಿಂದ ಪ್ರಸಿದ್ಧಿಸಲ್ಪಟ್ಟ ಬಸವ ಜಯಂತ್ಯೋತ್ಸವ ಪತ್ರಿಕಾ.

ದಯವಿಲ್ಲದ ಧರ್ಮವಾವುದಯ್ಯಾ?
ದಯವೇ ಬೇಕು ಸಕಲ ಪ್ರಾಣಿಗಳಲ್ಲಿ
ದಯವೇ ಧರ್ಮದ ಮೂಲವಯ್ಯಾ
ಕೂಡಲ ಸಂಗಮದೇವಾ ॥



ದೇವಲೋಕ ಮರ್ತ್ಯಲೋಕ ಬೇರಿಲ್ಲ ಕಾಣ
ರಣ್ಣಾ ಸತ್ಯವ ನುಡಿವುದೇ ದೇವಲೋಕ
ಮಿಥ್ಯವ ನುಡಿವುದೇ ಮರ್ತ್ಯಲೋಕ
ಆಚಾರವೇ ಸ್ವರ್ಗ ಅನಾಚಾರವೇ ನರಕ
ಇದಕ್ಕೆ ನೀವೇ ಪ್ರಮಾಣ ಕೂಡಲಸಂಗಮ
ದೇವಾ।

ಬಸವಣ್ಣನವರ ಸಂಕ್ಷಿಪ್ತ ಚರಿತ್ರೆ.

ಶ್ರೀ ವೀರಶೈವ ಮತೋದ್ಧಾರಕರಾದಂಥ ಮಹಾಸ್ವಭಾವರಾದ ಬಸವಣ್ಣನವರು ೭೮೯ ವರ್ಷಗಳ ಪೂರ್ವದಲ್ಲಿ ಶಾ. ಶ. ೧೦೩೬ ನೆಯ ವೈಶಾಖ ಶುದ್ಧ ತೃತೀಯಾದ ಶುಭ ಮುಹೂರ್ತದಲ್ಲಿ ವಿಜಾಪುರ ಜಿಲ್ಲೆಗೆ ಸೇರಿರುವ ಬಾಗೇವಾಡಿ ಗ್ರಾಮದಲ್ಲಿ ಅವತರಿಸಿದರು. ಇವರ ತಂದೆಯ ಹೆಸರು ಮಾದರಸ, ತಾಯಿಯ ಹೆಸರು ಮಾದಲಾಂಬಿಕೆ. ಈ ತಂದೆ-ತಾಯಿಗಳು ಆರಾಧ್ಯ ಬ್ರಾಹ್ಮಣರಾಗಿದ್ದರು. ಇವರ ವಂಶಜರು ಈಗಲೂ ಬಾಗೇವಾಡಿಯಲ್ಲಿ ಇರುತ್ತಾರಂತೆ.

ಬಸವಣ್ಣನವರು ಹುಟ್ಟಿದ ದಿನವೇ ಕಪ್ಪಡಿ ಸಂಗಮದ ಜಾತವೇದ ಮುನಿಗಳು ಇವರಿಗೆ ಲಿಂಗಧಾರಣ ಮಾಡಿದರು. ಎಂಟನೆಯ ವರ್ಷದಲ್ಲಿ ಬಸವಣ್ಣನವರು ಉಪನಯನ ಸಂಸ್ಕಾರವನ್ನು ತಿರಸ್ಕರಿಸಿ ಕಪ್ಪಡಿ ಸಂಗಮಕ್ಕೆ ಹೋದರು. ಅವರ ಕೂಡ ಅಕ್ಕನಾಗಮ್ಮನವರೂ ಹೋದರು. ಅಲ್ಲಿ ಗುರುಗಳ ಬಳಿಯಲ್ಲಿ ಬಸವೇಶ್ವರರೂ ಅಕ್ಕನಾಗಮ್ಮನವರೂ ಅಕ್ಕನಾಗಮ್ಮನವರ ಪತಿ ಶಿವಸ್ವಾಮಿಗಳೂ ಹನ್ನೆರಡು ವರ್ಷಗಳ ವರೆಗೆ ಇದ್ದರು. ಧರ್ಮಪ್ರಸಾರದ ಕೆಲಸದಲ್ಲಿ ಅವರೆಲ್ಲ ಸಹಾಯ ಮಾಡಿದರು. ಬಸವಣ್ಣನವರು ಇದೇ ಕಾಲಕ್ಕೆ ಕಪ್ಪಡಿಯಲ್ಲಿ ಜನ್ಮವೆತ್ತಿದರು. ತಮ್ಮ ೨೦ ನೆಯ ವರ್ಷದ ವಯಸ್ಸಿನಲ್ಲಿ ಬಸವೇಶ್ವರರು ಬಲದೇವ ಮಂತ್ರಿಯ ವಿಜ್ಞಾಪನೆಯ ಮೇರೆಗೆ ಕಲ್ಯಾಣಕ್ಕೆ ಹೋಗಿ ಆ ಮಂತ್ರಿಯ ಮಗಳಾದ ಗಂಗಾಂಬಿಕೆಯನ್ನು ವೀರಶೈವ ದೀಕ್ಷೆ ಕೊಡಿಸಿ ಮದುವೆಯಾದರು. ಮರುವರುಷ ಬಿಜ್ಜಳರಾಯನ ಸಂಬಂಧಿಯಾದ ನೀಲಾಂಬಿಕೆಗೆ ದೀಕ್ಷೆ ಕೊಡಿಸಿ ಲಗ್ನವಾದರು. ಬಸವಣ್ಣನವರಿಗೆ ಬಾಲಸಂಗಯ್ಯನೆಂಬ ಮಗನು ಹುಟ್ಟಿದನು. ಆದರೆ ಅವನು ಚಿಕ್ಕಂದಿನಲ್ಲಿಯೇ ಶಿವಾಧೀನನಾದನು. ಬಲದೇವ ಮಂತ್ರಿಯು ಶಿವಾಧೀನನಾಗಲು ಬಸವಣ್ಣನವರೇ ಪ್ರಧಾನ ಪಟ್ಟಕ್ಕೆ ನಿಯಮಿಸಲ್ಪಟ್ಟರು. ಮುಂದೆ ಹತ್ತು ವರ್ಷಗಳವರೆಗೆ ಅವರು ಮುಖ್ಯ ಮಂತ್ರಿಯ ಕೆಲಸವನ್ನೂ ಧರ್ಮಪ್ರಸಾರಣೆಯ ಕೆಲಸವನ್ನೂ ಒಳ್ಳೇ ಜೋರಿನಿಂದ ನಡೆಯಿಸಿದರು. ಅಷ್ಟರಲ್ಲಿ ಬಿಜ್ಜಳ ರಾಜನು ಹರಳಯ್ಯ, ಮಧುವಯ್ಯ ಎಂಬ ಶರಣರನ್ನು ವಧೆ ಮಾಡಿಸಿದ್ದಕ್ಕಾಗಿ ಬಸವೇಶ್ವರರು ಆ ಕೊಳೆಗಡದರ ಗ್ರಾಮದಲ್ಲಿ ಇರಕೂಡದೆಂದು ಕಪ್ಪಡಿಗೆ ಹೋಗಿ ಸಂಗಮನಾಥನಲ್ಲಿ ಐಕ್ಯರಾದರು. ನಂತರ ಸ್ವಲ್ಪ ದಿನಗಳಲ್ಲಿ ಬಿಜ್ಜಳನ ವಧೆಯಾಯಿತು. ಉಳಿದ ಶಿವಶರಣರು ಕಲ್ಯಾಣದಿಂದ ಹೊರಟು ಇಬ್ಭಾಗವಾಗಿ ಒಂದು ಭಾಗವು ಶ್ರೀಶೈಲಕ್ಕೆ ಮತ್ತೊಂದು ಭಾಗವು ಚನ್ನಬಸವೇಶ್ವರರನ್ನೊಡಗೊಂಡು ಉಳಿವೆಗೆ ಹೋಗಿ ಮುಟ್ಟಿದರು.

ಬಸವಣ್ಣನವರ ತತ್ವಗಳು.

ಬಸವೇಶ್ವರರು ಹುಟ್ಟಿ ಕರ್ನಾಟಕದಲ್ಲಿ ಒಂದು ಹೊಸ ಚೈತನ್ಯವನ್ನೇ ಹರಿಬಿಟ್ಟರು. ಅವರು ಧರ್ಮಪ್ರಸಾರ ಮಾಡಿದ್ದು ಒಂದು ನೂತನ ವಿಧವೇ ಆಗಿದೆ. ಸನ್ಯಾಸ ವ್ರತವನ್ನು ಕೈಕೊಂಡಾಗಲಿ, ಇಲ್ಲವೆ ದೇಶದಲ್ಲೆಲ್ಲ ಸಂಚರಿಸಿ ಉಪದೇಶ ಮಾಡುತ್ತಾಗಲಿ ಧರ್ಮಪ್ರಸಾರ ಮಾಡಲಿಲ್ಲ. ಅವರ ಪ್ರಾಪಂಚಿಕರಾಗಿದ್ದು ಮಂತ್ರಿಪದದ ಕೆಲ

[illegible]
[illegible]
[illegible]
[illegible] ॥
[illegible] ॥
[illegible] ॥
[illegible] ॥

[illegible]
[illegible] ॥
[illegible]
[illegible] ॥
[illegible]
[illegible]

ಸವನ್ನೂ ಧರ್ಮಪ್ರಚಾರವೆಂಬ ಕೆಲಸವನ್ನೂ ಕೂಡಲೇ ಮಾಡಿದರು. ಬಸವಣ್ಣನವರು [illegible] ಹದಿನಾರನೇ ತಮ್ಮ ಧರ್ಮವನ್ನು ಸಾರತೊಡಗಿದುದರಲ್ಲಿ ಸಂದೇಹವಿಲ್ಲ. ಅವರ ವೈರಿಗಳು [illegible] ರೂ ಕೂಡ ಅವನ್ನು ಶಾಂತಿಯಿಂದ ತಾಳಿಕೊಂಡು ಅವರಿಗೆ ಹಿತವನ್ನೇ ಬಯಸುತ್ತಿದ್ದರು. [illegible] ಕೊಲ್ಲಯದವರನ್ನ ಹೊರದಪದಿರಿ. ಕೈಬಿದವರನ್ನ ಬಂಧುಗಳೆಂದಿ" ಎಂಬ ಅವರ ವಚನವೇ [illegible]
ಇಂಥ ವಿಶ್ವಪ್ರೇಮಿಗಳಿದ್ದುದರಿಂದಲೇ ಕೇವಲ ಹತ್ತು ವರ್ಷಗಳ ಅವಧಿಯಲ್ಲಿ [illegible] ಧರ್ಮವು ಕರ್ನಾಟಕದ ಬಹು ಭಾಗದಲ್ಲಿ ಹಬ್ಬಿ ಹೋಯಿತು. ಒಂದು ಧರ್ಮವು [illegible] ಬೇಕಾದರೆ ಆ ಧರ್ಮದ ತತ್ವಗಳು ಜನಸಾಮಾನ್ಯರಿಗೂ ಎಲ್ಲ ತರದ ಉದ್ಯೋಗ ಮಾಡುವವರಿಗೂ [illegible] ಆಚರಿಸಲಿಕ್ಕೆ ಬರುವಂಥವುಗಳಾಗಿರಬೇಕೆಂಬುದು ಬಸವಣ್ಣನವರ ಮೂಲತತ್ವವು. [illegible] ಸಮಾಜದಲ್ಲಿಯೇ ಎಲ್ಲ ತರದ ಉದ್ಯೋಗಗಳನ್ನು ಕಲ್ಪಿಸಿದರು. ಎಲ್ಲ ತರದ ಉದ್ಯೋಗ ( ) [illegible] ಅನುಕೂಲವಾಗುವ ಸಾಮಾನ್ಯ ಧರ್ಮತತ್ವಗಳನ್ನು ಹಾಕಿ ಕೊಟ್ಟರು. ಧರ್ಮ ತತ್ವಗಳು [illegible] ರಿಗೂ ತಿಳಿಯುವಂಥ ಭಾಷೆಯಲ್ಲಿ ಜನರಿಗೆ ಹೇಳಬೇಕೆಂಬುದು ಅವರ ಇನ್ನೊಂದು ತತ್ವ. [illegible] ತಿರುಳುಗನ್ನಡ ವಚನದಲ್ಲಿ ಧರ್ಮತತ್ವಗಳನ್ನು ಸುಲಭವಾಗಿಯೂ ಸರಳವಾಗಿಯೂ ಬೋಧಿಸಿದರು. ಬಸವಣ್ಣನವರು ಬರಿಯ ವೇದಾಂತ ವಾದಿಗಳಲ್ಲ. ಅವರು ಶಿವಾಚಾರ ಪ್ರಿಯರು. ಸದಾಚಾರಸಂಪನ್ನರು. [illegible] ರದಲ್ಲಿ ಇರುವಷ್ಟು ಬೇರಾವ ಮಾರ್ಗದಲ್ಲಿಲ್ಲವೆಂಬುದು ಅವರ [illegible] ಆದುದರಿಂದಲೇ ಅವರು ಆಚಾರಕ್ಕೆ [illegible] ತ್ವವನ್ನು ಕೊಟ್ಟಿದ್ದಾರೆ. "ಆಚಾರವೇ ಸ್ವರ್ಗ, ಅನಾಚಾರವೇ ನರಕ" ಎಂಬ [illegible] ನುಡಿದು ನಡೆದಿದ್ದಾರೆ. ನಡೆದು ನುಡಿದಿದ್ದಾರೆ. "[illegible]" ಎಂಬ [illegible] ಭಕ್ತಾಚಾರವು ಎಂತಹದೆಂಬುದನ್ನು [illegible] ಸ್ವಲ್ಪವೂ ಕುಂದಿಲ್ಲದ ನಡೆದು ಶಿವಶರಣರೆಲ್ಲರಿಗೆ ಬಸವಣ್ಣ ಮಾರ್ಗದರ್ಶಕರಾದರು. [illegible] ವಿಶ್ವಾಸವಿಟ್ಟು ಶಿವಾಚಾರದಲ್ಲಿ ನಡೆದರೆ ಭಕ್ತಿಯು ಗಟ್ಟಿಯಾಗುವುದೆಂದು ಪ್ರತಿಪಾದಿಸಿದ [illegible] ಳಿಂದ ಬೋಧಿಸಿದರು. ವರ್ಣಾಶ್ರಮದಲ್ಲಿ ಪುರುಷರಷ್ಟೇ ಸ್ತ್ರೀಯರಿಗೂ ಅಧಿಕಾರವಿದೆಯೆಂದು [illegible] ಆದುದರಿಂದಲೇ ಸುಖಾದೇವಿಯಕ್ಕ, ಅಕ್ಕನಾಗಮ್ಮ, ನೀಲಮ್ಮ ಮೊದಲಾದ ಲಿಂಗಾಂಗಿ ಧರ್ಮಾಚಾರ [illegible] ನಮ್ಮಲ್ಲಿ ಉದ್ಭವಿಸಿ ನಮ್ಮ ಸಮಾಜಕ್ಕೆ ಭೂಷಣಪ್ರಾಯರಾಗಿ ಹೋದರು.

ಬಸವಣ್ಣನವರು ಕಾಯಕಕ್ಕೆ ಬಹಳ ಮಹತ್ವವನ್ನು ಕೊಟ್ಟಿದ್ದರು. ಪ್ರತಿಯೊಬ್ಬ [illegible] ದಾಟರೆಂದು ಕಾಯಕದಿಂದ ತಮ್ಮ ಪಾಲನೆಪೋಷಣೆಯನ್ನು ನಡೆಯಿಸುವ ಸ್ವತಂತ್ರ ಪ್ರವೃತ್ತಿಯ [illegible] ಬಿಲ್ಲ. ಮೋಳಿಗೆಯ ಮಾರಯ್ಯಾ, ನುಲಿಯ ಚಂದಯ್ಯಾ [illegible] ಕಗಳನ್ನು ಕೈಕೊಂಡಿದ್ದರೆಂಬುದು ನಮಗೆ ತಿಳಿದು ಬಂದ ಮಾತಾಗಿದೆ. ಬಸವಣ್ಣನವರೂ ಕೂಡ ಈ ಕಾಯಕ [illegible] ಸಲುವಾಗಿಯೇ ತಲೆಕ ಮತ್ತು ಮಂತ್ರಿಯ ಕೆಲಸಗಳನ್ನು ಸ್ವೀಕರಿಸಿದರು. "ಕಾಯಕವೇ ಕೈಲಾಸ" ಎಂದು ಅವರು ಸಾರಿದರು. ಪ್ರತಿಯೊಬ್ಬ ವೀರಶೈವನು ವೀರಶೈವನಿಂದ [illegible] ಪದ್ಧತಿಗಳನ್ನು ಪಾಲಿಸಬೇಕೆಂಬು ವನ್ನು ಒಂದು ಶೀಲವನ್ನಾಗಿಯೇ ನಿರ್ಧರಿಸಿದರು. ಈ ವಿಷಯವಾಗಿ ನೀಲಮ್ಮನವರು ಹೀಗೆ ಹಾಡಿದ್ದಾರೆ "ಪಟ್ಟೀ ವ ಬಿಟ್ಟಾರು ಪಟ್ಟೀನ ಹೊದ್ದಾರು ಪಟ್ಟಣವಾಳು ಅರಸಾದ ಸುಸ್ವ" ಹೀಗೆ ಕಾಯಕವನ್ನು ಶೀಲದಲ್ಲಿಯೂ [illegible] ವನ್ನು ಕಾಯಕದಲ್ಲಿಯೂ ಬೆರಸಿದ ನೈತಿಕ್ಯವು ಬಸವಣ್ಣನವರಿಗೆ ಸಲ್ಲುವದು.

ವಚನವಾಙ್ಮಯದಿಂದ ಕನ್ನಡ ಸಾಹಿತ್ಯಕ್ಕೆ ನವಚೈತನ್ಯವನ್ನೇ ಕೊಟ್ಟ ಬಸವಾದಿ ಪ್ರಮಥರಿಗೆ ಪ್ರತಿಯೊಬ್ಬ ಕನ್ನಡಿಗನೂ ಋಣಿಯಾಗಿರುತ್ತಾನೆಂಬ ಮಾತು ಲಕ್ಷದಲ್ಲಿಡತಕ್ಕದ್ದಾಗಿದೆ. ಅವರ [illegible] ಮಹಾತ್ಮಾಜಿಯವರು ಬಹುಭಾಗ ಆಚರಣೆಯಲ್ಲಿ ತಂದಿದ್ದಾರೆ. ಅವರ ವಚನ ತತ್ವ [illegible] ತತ್ವಶಾಸ್ತ್ರಕ್ಕೆ ಕಳೆ ಬಂದಿರುವುದು. ಅದರಿಂದ ಪ್ರತಿಯೊಬ್ಬ ಭಾರತೀಯ ತತ್ವಶಾಸ್ತ್ರಜ್ಞನಾದರೂ [illegible] ಪ್ರಮಥರ ವಿಷಯವಾಗಿ ಅಭಿಮಾನ ಪಡುವದು ಯೋಗ್ಯವು. ಮೇಲಾಗಿ ಬಸವಣ್ಣನವರು [illegible] ಹೋದ ಸುಪ್ರಸಿದ್ಧ ಧಾರ್ಮಿಕ ವಿಭೂತಿಗಳ ಮಣಿಮಾಲಿಕೆಯೊಳಗಣ ಒಂದು ದಿವ್ಯ ಮಣಿಯು. [illegible] ಸಾಮಾನ್ಯ ಧರ್ಮಸಕ್ತಾಶಿಗಳಿಗೆಲ್ಲರಿಗೂ ಅವರು ಪೂಜ್ಯರೇ ಸರಿ. ಅವರ [illegible] ಎಷ್ಟೋ ಒಡೆದು ಕಾಣಹತ್ತಿವೆ. [illegible] ಅವರು ಎಂಥ ಜ್ಞಾನಿಗಳಿದ್ದರೆಂಬುದು [illegible] ರಿಗೆ ಅವರಿಂದಾದ ಅನುಗ್ರಹವನ್ನಂತೂ ಬಣ್ಣಿಸಲಳವಲ್ಲ. ಏಕೆಂದರೆ ಬಸವಣ್ಣನವರು [illegible] ಶೈವ ಧರ್ಮತತ್ವಗಳನ್ನು ಬೋಧಿಸಿ ಧರ್ಮಪ್ರಸಾರ ಮಾಡದೆ ಹೋಗಿದ್ದರೆ ವೀರಶೈವ [illegible] ತ್ರಿತ್ವೋ ಇಲ್ಲೋ ಸಂದೇಹವಾಗುತ್ತಿದೆ. ಅಂದಮೇಲೆ ಬಸವ ಮಹಾತ್ಮನ [illegible] ನಮ್ಮೆಲ್ಲರ ಕರ್ತವ್ಯವಲ್ಲವೇ? ಹಾಗಾದರೆ ಬನ್ನಿ; ಸರ್ವಜ್ಞನ ಕೂಡ ನಾವು

" ಬಸವನೆಂದವ ನಾತಕ ಬೆಸೆಗೆಟ್ಟು ಹೋಗುವುದು ।
ಬಸಳಿಗೆ ಪಸುಪೂಳಸಲಿಪರ್ಗ ಹಳಿಯಿರಾರೆ ।
ಹುಸಿಹುಸಿ ಬೇಡಿರಿಣಿಕ ಸರ್ವಜ್ಞ ॥ " ಎಂದು ಹಾಡೋಣ

